# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

## <u>ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು</u>

## ದಿನಾಂಕ:05.12.2023

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

ದೂರವಾಣಿ ಸಂಖ್ಯೆ: 08192–208029, ಫ್ಯಾಕ್ಸ್ ಸಂಖ್ಯೆ: 08192–208008

ಃ ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮಅಮೃತಂ ಃ

**ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/182/2023–24/** **ದಿನಾಂಕ:12.12.2023**

ಇವರಿಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಮಾನ್ಯರೆ,

**ವಿಷಯ : ದಿನಾಂಕ:05.12.2023 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.**

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ – III ರ ಪ್ರಕರಣ 16 (i) ರ ರೀತ್ಯ ದಿನಾಂಕ:05.12.2023 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ–III ರ ಪ್ರಕರಣ 16 (i) ರ ರೀತ್ಯ ನಡಾವಳಿ ತಲುಪಿದ **ಏಳು ದಿನಗಳೊಳಗಾಗಿ** ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

**ಪ್ರತಿಗಳು:**

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು–560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು– 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಶೈಕ್ಷಣಿಕ/ಮಾಸನಿ/ಅಭಿವೃದ್ಧಿ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ–577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ–577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ–577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ–577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕಃ 05.12.2023 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

**ಸಭೆಯಲ್ಲಿ ಹಾಜರಿದ್ದ ಸದಸ್ಯರು:**

1. ಪ್ರೊ. ಬಿ.ಡಿ ಕುಂಬಾರ., ಮಾನ್ಯ ಕುಲಪತಿಗಳು : ಅಧ್ಯಕ್ಷರು
2. ಕು. ಗೀತಾ ಜಿ., ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
3. ಶ್ರೀಮತಿ ಶಾರದಾ ಪಾಟೀಲ, ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
4. ಪ್ರೊ. ವೆಂಕಟರಾವ್ ಮಾರುತಿರಾವ್ ಪಲಾಟೆ, ಡೀನರು, ಕಲಾ ನಿಕಾಯ : ಸದಸ್ಯರು
5. ಪ್ರೊ. ಮಹಾಬಲೇಶ್ವರ ಯು. ಎಸ್., ಪ್ರಾಧ್ಯಾಪಕರು : ಸದಸ್ಯರು
6. ಡಾ. ನಾಗರಾಜ ಎಸ್. ಹೆಚ್., ಪ್ರಾಚಾರ್ಯರು : ಸದಸ್ಯರು
7. ಡಾ. ಲಿಂಗರಾಜ ಪೂಜಾರ್., ಪ್ರಾಚಾರ್ಯರು : ಸದಸ್ಯರು
8. ಡಾ. ದಿವಾಕರ್ ನಾಯ್ಕ ಕೆ. ಎಸ್., ಪ್ರಾಚಾರ್ಯರು : ಸದಸ್ಯರು
9. ಶ್ರೀಮತಿ ಜಯಲಕ್ಷ್ಮಿ ಎಂ. ಆರ್., ಪ್ರಾಚಾರ್ಯರು : ಸದಸ್ಯರು
10. ಡಾ. ರಮೇಶ್ ಸಿ. ಕೆ., ಕುಲಸಚಿವರು (ಪರೀಕ್ಷಾಂಗ). : ಸದಸ್ಯರು
11. ಶ್ರೀಮತಿ ಸರೋಜ ಬಿ.ಬಿ., ಕುಲಸಚಿವರು : ಸದಸ್ಯ ಕಾರ್ಯದರ್ಶಿ

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 8ಕ್ಕಿಂತ ಹೆಚ್ಚು ಅಂದರೆ 11 ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಕುಲಸಚಿವರು ಮಾನ್ಯ ಕುಲಪತಿಗಳನ್ನು ಸಭೆಗೆ ಸ್ವಾಗತಿಸಿ ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ನಂತರ, ನೂತನವಾಗಿ ವಿಶ್ವವಿದ್ಯಾನಿಲಯದ ಕುಲಸಚಿವರು(ಪರೀಕ್ಷಾಂಗ) ಹುದ್ದೆಗೆ ನೇಮಕವಾಗಿರುವ ಡಾ. ರಮೇಶ್ ಸಿ. ಕೆ., ಇವರನ್ನು ಹಾಗೂ ಪ್ರಾಂಶುಪಾಲರ ವರ್ಗದಿಂದ ಸಿಂಡಿಕೇಟ್‌ಗೆ ನಾಮನಿರ್ದೇಶಿತರಾದ 04 ಪ್ರಾಂಶುಪಾಲರುಗಳನ್ನು ಅಭಿನಂದಿಸಿ ಸ್ವಾಗತಿಸಿದರು. ತದನಂತರ, ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು ಕುಲಪತಿಗಳು

| ಪ್ರಾಧಿಕಾರ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(a)/(10/23) |

**–:ಟಿಪ್ಪಣಿ:–**

**ವಿಷಯ: ದಿನಾಂಕ:07.10.2023 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ.**

*****

ದಿನಾಂಕ:07.10.2023 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದಿನಾಂಕ:17.10.2023 ರಂದು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರುಗಳಿಗೆ ಕಳುಹಿಸಲಾಗಿತ್ತು. ಸದರಿ ನಡಾವಳಿಗಳ ಕುರಿತು ಇದುವರೆಗೂ ಯಾವುದೇ ಆಕ್ಷೇಪಣೆಗಳು ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ, ಸದರಿ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:05.12.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

## ನಿರ್ಣಯ

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:07.10.2023 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

1. ಸದರಿ ನಡಾವಳಿಗಳ ವಿಷಯ ಸಂಖ್ಯೆ:02(e)/(10/23) (ಪುಟಸಂಖ್ಯೆ:07) ವಿಷಯ ಸಂಖ್ಯೆ: 02(f) /(10/23) (ಪುಟಸಂಖ್ಯೆ:34) ಕ್ಕೆ ಸಂಬಂಧಪಟ್ಟಂತೆ ಶ್ರೀ ಪ್ರಶಾಂತ ವಿ, ಹಂಗಾಮಿ ಕಿರಿಯ ಸಹಾಯಕರು ಹಾಗೂ ಶ್ರೀ ಶೋಭ್ಯಾನಾಯ್ಕ ಹೆಚ್, ಹಂಗಾಮಿ ಕಿರಿಯ ಸಹಾಯಕರು ಇವರಿಂದ ಮುಚ್ಚಳಿಕೆ ಪತ್ರ ಪಡೆದ ನಂತರ ಸದರಿಯವರಿಗೆ ವೇತನ ಪಾವತಿಸಲು ಸಭೆಯು ನಿರ್ಣಯಿಸಿತು.
2. ವಿಷಯ ಸಂಖ್ಯೆ:02(h)/(10/23) (ಪುಟಸಂಖ್ಯೆ:10) ಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಕಾನೂನು ಕೋಶಕ್ಕೆ ನಿವೃತ್ತ ನ್ಯಾಯಾಧೀಶರನ್ನು ನೇಮಕ ಮಾಡಲು ಹಾಗೂ ಸ್ಥಳೀಯ/ಉಚ್ಚನ್ಯಾಯಾಲಯದ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಾನೂನು ಸಲಹೆಗಾರರನ್ನು ನೇಮಕ ಮಾಡಿಕೊಳ್ಳಲು ಸಿಂಡಿಕೇಟ್ ನಿರ್ಣಯದಂತೆ(07.10.2023) ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣದಲ್ಲಿ ಸ್ವವಿವರವನ್ನು ದಿನಾಂಕ:24.11.2023 ರೊಳಗೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಸೂಚಿಸಲಾಗಿತ್ತು. ಆದರೆ, ಯಾವುದೇ ಅರ್ಜಿಗಳು ಸ್ವೀಕೃತವಾಗದೇ ಇರುವುದರಿಂದ ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಹಿತದೃಷ್ಟಿಯಿಂದ ಸದರಿ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲು ಸಭೆಯು ಒಮ್ಮತದಿಂದ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

   ಮುಂದುವರೆದು, ಸುದೀರ್ಘ ಚರ್ಚೆಯ ನಂತರ ಸಭೆಯು ನಡಾವಳಿಗಳನ್ನು ಒಮ್ಮತದಿಂದ ದೃಢೀಕರಿಸಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(a)/(10/23) |

## -: ಟಿಪ್ಪಣಿ :-

**ವಿಷಯ:** **ಡಾ. ಯು.ಎಸ್. ಮಹಾಬಲೇಶ್ವರ್, ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ ಇವರು ಸಂಶೋಧನೆಗೆ ಸಂಬಂಧಿಸಿದಂತೆ Yeungnam University, Korea ದೇಶಕ್ಕೆ ಹೋಗಿ ಬರುಲು ಅನುಮೋದನೆ ನೀಡುವ ಕುರಿತು.**

ಉಲ್ಲೇಖ:
1. ಅಧ್ಯಕ್ಷರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ ಇವರ ಪತ್ರ ಸಂಖ್ಯೆ: ದಾವಿವಿ/ಗಅವಿ/2023–24/Korea-Taiwan-Visits/74, ದಿನಾಂಕ: 03.11.2023.
2. ಮಾನ್ಯ ಕುಲಪತಿಗಳ ಆದೇಶ ದಿನಾಂಕ:04.11.2023

*********

ಉಲ್ಲೇಖ (1)ರ ಪತ್ರದಲ್ಲಿ ಅಧ್ಯಕ್ಷರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ – ಇವರು ತಮ್ಮ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಡಾ. ಯು.ಎಸ್. ಮಹಾಬಲೇಶ್ವರ್ ಇವರಿಗೆ ಸಂಶೋಧನೆಗೆ ಸಂಬಂಧಿಸಿದಂತೆ ದಿನಾಂಕ:11.12.2023 ರಿಂದ 22.12.2023ರವರಗೆ Yeungnam University, Korea ದೇಶಕ್ಕೆ ಹೋಗಿ ಬರಲು ಅನುಮತಿ ನೀಡುವಂತೆ ಕೋರಿರುತ್ತಾರೆ. ಈ ಕುರಿತು ಉಲ್ಲೇಖ (2)ರ ಮಾನ್ಯ ಕುಲಪತಿಗಳ ಆದೇಶಾನುಸಾರ ಡಾ. ಯು.ಎಸ್. ಮಹಾಬಲೇಶ್ವರ್, ಪ್ರಾಧ್ಯಾಪಕರು ಇವರಿಗೆ ದಿನಾಂಕ:11.12.2023 ರಿಂದ 22.12.2023ರವರೆಗೆ Korea ದೇಶಕ್ಕೆ ಹೋಗಿ ಬರಲು ಅನುಮತಿ ನೀಡಲಾಗಿದೆ.

ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ಸದರಿಯವರಿಗೆ ನೀಡಿರುವ ಆದೇಶಕ್ಕೆ ದಿನಾಂಕ:05.12.2023ರ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

### ನಿರ್ಣಯ

ಪ್ರೊ. ಯು.ಎಸ್. ಮಹಾಬಲೇಶ್ವರ್, ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ ಇವರು ಶೈಕ್ಷಣಿಕ ಉದ್ದೇಶಕ್ಕಾಗಿ ದಿನಾಂಕ:11.12.2023 ರಿಂದ 22.12.2023 ರವರೆಗೆ ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಹಣಕಾಸು/ ಆರ್ಥಿಕ ಹೊರೆ ಇಲ್ಲದೆ Yeungnam University, Korea ದೇಶಕ್ಕೆ ಹೋಗಿ ಬರಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(b)/(12/23) |

## -: ಟಿಪ್ಪಣಿ :-

**ವಿಷಯ: ಹೊರಗುತ್ತಿಗೆ ನೌಕರರಿಗೆ 2023-24ನೇ ಸಾಲಿನ ಏಪ್ರಿಲ್ ಮಾಹೆಯಿಂದ ವ್ಯತ್ಯಾಸದ ತುಟ್ಟಿಭತ್ಯೆಯೊಂದಿಗೆ ಕನಿಷ್ಠ ವೇತನ ನೀಡುವಂತೆ ಕೋರಿರುವ ಬಗ್ಗೆ.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:21.06.2023

*********

ವಿಶ್ವವಿದ್ಯಾನಿಲಯದಲ್ಲಿ ಹೊರಗುತ್ತಿಗೆ ಮೂಲಕ ಕರ್ತವ್ಯ ನಿರ್ವಹಿಸುತ್ತಿರುವ ಸಿ & ಡಿ ಗ್ರೂಪ್ ನೌಕರರುಗಳಿಗೆ ಕಾರ್ಮಿಕ ಇಲಾಖೆಯ **ಅಧಿಸೂಚನೆ ಸಂಖ್ಯೆ: ಕೆಎಇ 18 ಎಲ್‌ಡಬ್ಲ್ಯೂಎ 2022, ದಿನಾಂಕ:28.07.2022**ರಲ್ಲಿ ಏಪ್ರಿಲ್-2023 ಮಾಹೆಯಿಂದ ತುಟ್ಟಿಭತ್ಯೆಯನ್ನು ಹೆಚ್ಚಿಸಿರುವುದರಿಂದ ವ್ಯತ್ಯಾಸದ ತುಟ್ಟಿಭತ್ಯೆ ರೂ.603.60/- ಗಳೊಂದಿಗೆ ಕನಿಷ್ಠ ವೇತನವನ್ನು ಜಾರಿಗೊಳಿಸುವ ಸಂಬಂಧ ದಿನಾಂಕ:31.07.2023 ರ ಸಿಂಡಿಕೇಟ್ ಸಾಮಾನ್ಯ ಸಭೆಯ ನಿರ್ಣಯಕ್ಕಾಗಿ ಮಂಡಿಸಲಾಗಿತ್ತು. ಆದರೆ, ಸಿಂಡಿಕೇಟ್ ಸಭೆಯಲ್ಲಿ ಸದರಿ ವಿಷಯವನ್ನು ಮುಂದೂಡಲಾಗಿತ್ತು.

ಆದ್ದರಿಂದ, ಮುಂದೂಡಲಾಗಿದ್ದ ಸದರಿ ವಿಷಯವನ್ನು ದಿನಾಂಕ:05.12.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ನಿರ್ಣಯ**

ವಿಶ್ವವಿದ್ಯಾನಿಲಯದಲ್ಲಿ ಹೊರಗುತ್ತಿಗೆ ಮೂಲಕ ಕರ್ತವ್ಯ ನಿರ್ವಹಿಸುತ್ತಿರುವ ಸಿ & ಡಿ ಗ್ರೂಪ್ ನೌಕರರುಗಳಿಗೆ ಕಾರ್ಮಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಕೆಎಇ 18 ಎಲ್‌ಡಬ್ಲ್ಯೂಎ 2022, ದಿನಾಂಕ:28.07.2022ರ ಆದೇಶದನ್ವಯ ಡಿಸೆಂಬರ್-2023 ಮಾಹೆಯ ವೇತನದೊಂದಿಗೆ ರೂ.603.60/-ಗಳ ತುಟ್ಟಿಭತ್ಯೆಯನ್ನು ನೀಡಲು ಸಭೆಯು ನಿರ್ಣಯಿಸಿತು. ಉಳಿದಂತೆ, ಏಪ್ರಿಲ್-2023ರಿಂದ ನವೆಂಬರ್-2023ರ ವರೆಗಿನ ಒಟ್ಟು 08 ತಿಂಗಳ ತುಟ್ಟಿಭತ್ಯೆಯ ವ್ಯತ್ಯಾಸದ ಮೊತ್ತವನ್ನು ಆರ್ಥಿಕ ಲಭ್ಯತೆ ನೋಡಿಕೊಂಡು ಅಥವಾ ಸರ್ಕಾರದಿಂದ ವಿದ್ಯಾರ್ಥಿವೇತನ ಬಿಡುಗಡೆಯಾದ ನಂತರ ನೀಡಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(c)/(12/23) |

## -: ಟಿಪ್ಪಣಿ :-

**ವಿಷಯಃ ಶ್ರೀ ವೈ. ಹೆಚ್. ಕುಂದರಗಿ, ತೋಟಗಾರಿಕೆ ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ ಇವರ ವೈದ್ಯಕೀಯ ವೆಚ್ಚದ ಮರುಭರಿಕೆ ಕುರಿತು.**

*********

ಶ್ರೀ ವೈ. ಹೆಚ್. ಕುಂದರಗಿ, ತೋಟಗಾರಿಕೆ ಅಧಿಕಾರಿ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರು ಕಿದ್ವಾಯಿ ಮೆಮೋರಿಯಲ್ ಕ್ಯಾನ್ಸರ್ ಆಸ್ಪತ್ರೆ, ಬೆಂಗಳೂರಿನಲ್ಲಿ ಅಪೆಂಡಿಕ್ಸ್ ಮತ್ತು ಕರುಳಿನ ಇನ್ಫೆಕ್ಷನ್ ಆಪರೇಷನ್ ಮಾಡಿಸಿದ್ದು, ಸದರಿಯವರು ಆಪರೇಷನ್ ವೈದ್ಯಕೀಯ ವೆಚ್ಚದ ಒಟ್ಟು ಬಾಬ್ತು ರೂ.2,46,785/- ಗಳನ್ನು ಮರುಭರಿಕೆ ಮಾಡುವಂತೆ ಕೋರಿರುತ್ತಾರೆ.

ವೈದ್ಯಾಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ ಇವರು ರೂ.2,46,785/-ಗಳಿಗೆ ಶಿಫಾರಸ್ಸು ಮಾಡಿ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಮರುಪಾವತಿ ಮಾಡಲು ಸೂಚಿಸಿರುವ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ದಿನಾಂಕ:05.12.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

<u>ನಿರ್ಣಯ</u>

ಶ್ರೀ ವೈ. ಹೆಚ್. ಕುಂದರಗಿ, ತೋಟಗಾರಿಕೆ ಅಧಿಕಾರಿ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರು ಕಿದ್ವಾಯಿ ಮೆಮೋರಿಯಲ್ ಕ್ಯಾನ್ಸರ್ ಆಸ್ಪತ್ರೆ, ಬೆಂಗಳೂರಿನಲ್ಲಿ ಅಪೆಂಡಿಕ್ಸ್ ಮತ್ತು ಕರುಳಿನ ಇನ್ಫೆಕ್ಷನ್ ಆಪರೇಷನ್ ಮಾಡಿಸಿದ್ದು, ಸದರಿಯವರ ಆಪರೇಷನ್ ವೈದ್ಯಕೀಯ ವೆಚ್ಚದ ಒಟ್ಟು ಬಾಬ್ತು ರೂ.2,46,785/- ಗಳನ್ನು ಮರುಭರಿಕೆ ಮಾಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　　　ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(d)/(12/23) |

# -ಃ ಟಿಪ್ಪಣಿ ಃ-

**ವಿಷಯಃ ಶ್ರೀ ಶಶಿಧರ್ ಕೆ. ಎಂ. ಇವರನ್ನು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯದ ಸಂಪರ್ಕ ಅಧಿಕಾರಿಯನ್ನಾಗಿ ಮುಂದುವರಿಸುವ ಕುರಿತು.**

*********

ವಿಶ್ವವಿದ್ಯಾನಿಲಯದ ಉಲ್ಲೇಖ (1)ರ ಅಧಿಕೃತ ಜ್ಞಾಪನ ಪತ್ರದಲ್ಲಿ ಶ್ರೀ ಕೆ.ಎಂ. ಶಶಿಧರ್, – ಇವರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ ಸೆಕ್ಷನ್ 56ರನ್ವಯ ಮಾನ್ಯ ಕುಲಪತಿಗಳಿಗಿರುವ ಅಧಿಕಾರದನ್ವಯ ಮಾನ್ಯ ಕುಲಪತಿಗಳ ಆಪ್ತಕಾರ್ಯಾಲಯಕ್ಕೆ ಸಂಪರ್ಕಾಧಿಕಾರಿಗಳನ್ನಾಗಿ ದಿನಾಂಕಃ 05.09.2022 ರಿಂದ 04.09.2023ರವರೆಗೆ ಒಂದು ವರ್ಷದ ಅವಧಿಗೆ ನೇಮಕ ಮಾಡಲಾಗಿತ್ತು.

ಮುಂದುವರೆದು ಉಲ್ಲೇಖ (2)ರ ಪತ್ರದಲ್ಲಿ ಶ್ರೀ ಕೆ.ಎಂ. ಶಶಿಧರ್ – ಇವರು ಅನಿವಾರ್ಯ ಕಾರಣಗಳಿಂದಾಗಿ ರಜೆಯ ಮೇಲೆ ತೆರಳಿದ್ದು ಈಗ ಪ್ರಸ್ತುತ ವಿಶ್ವವಿದ್ಯಾನಿಲಯದ ವಿನಿಯಮಗಳು/ ಪರಿನಿಯಮಗಳನ್ನು ರಚಿಸಲು ಶ್ರೀ ಕೆ.ಎಂ. ಶಶಿಧರ್ ಇವರ ಸೇವೆಯು ವಿಶ್ವವಿದ್ಯಾನಿಲಯಕ್ಕೆ ಅಗತ್ಯವಾಗಿರುವುದರಿಂದ ಸದರಿಯವರನ್ನು ಮುಂದುವರೆಸಲು ದಿನಾಂಕ:05.12.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## <u>ನಿರ್ಣಯ</u>

ಶ್ರೀ ಕೆ.ಎಂ. ಶಶಿಧರ್ – ಇವರು ಅನಿವಾರ್ಯ ಕಾರಣಗಳಿಂದಾಗಿ ರಜೆಯ ಮೇಲೆ ತೆರಳಿದ್ದು ಈಗ ಸದರಿಯವರ ಸೇವೆಯು ವಿಶ್ವವಿದ್ಯಾನಿಲಯಕ್ಕೆ ಅಗತ್ಯವಾಗಿರುವುದರಿಂದ ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯದ ಸಂಪರ್ಕ ಅಧಿಕಾರಿಯನ್ನಾಗಿ ಮುಂದುವರಿಸುವಂತೆ ಮಾಹೆಯಾನ ರೂ.35,000/– ಗಳಂತೆ 06 ತಿಂಗಳ ಅವಧಿಗೆ ನೇಮಕ ಮಾಡಿಕೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(e)/(12/23) |

## –ಃ ಟಿಪ್ಪಣಿ ಃ–

**ವಿಷಯಃ** **ದಾವಣಗೆರೆ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗಕ್ಕೆ ಸಹಾಯಕ ಅಭಿಯಂತರರು (ವಿದ್ಯುತ್) ಹುದ್ದೆಯನ್ನು ಮಂಜೂರು ಮಾಡುವ ಕುರಿತು.**

ಉಲ್ಲೇಖ:
1. ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:31.07.2023 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯ
2. ವಿಶ್ವವಿದ್ಯಾನಿಲಯದಿಂದ ದಿನಾಂಕ:14.08.2023 ರಂದು ಸರ್ಕಾರಕ್ಕೆ ಸಲ್ಲಿಸಿದ ಪತ್ರ.
3. ಸರ್ಕಾರದ ಪತ್ರಸಂ:ಇಡಿ:148:ಯುನ್ಇ:2023 ದಿನಾಂಕ:06.09.2023

*********

ದಾವಣಗೆರೆ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗಕ್ಕೆ ಸಹಾಯಕ ಅಭಿಯಂತರರು (ವಿದ್ಯುತ್) ಹುದ್ದೆಯನ್ನು ಅಧೀಕ್ಷಕ ಹುದ್ದೆಯನ್ನಾಗಿ ಪರಿವರ್ತಿಸಿ ಮಂಜೂರು ಮಾಡುವ ಸಲುವಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ಸಂಬಂಧ ಉಲ್ಲೇಖ (1) ರನ್ವಯ ದಿನಾಂಕಃ 31.07.2023 ರಂದು ಜರುಗಿದ ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಮತ್ತು ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಅದರಂತೆಯೆ ವಿಶ್ವವಿದ್ಯಾನಿಲಯದಿಂದ ದಿನಾಂಕಃ14.08.2023 ರಂದು ಸರ್ಕಾರಕ್ಕೆ ಪತ್ರಿಸಿ ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಅಧೀಕ್ಷಕ ಹುದ್ದೆಯನ್ನು ಪರಿವರ್ತಿಸಿ ಸಹಾಯಕ ಅಭಿಯಂತರರು (ವಿದ್ಯುತ್) ಹುದ್ದೆಯನ್ನು ಸೃಜಿಸುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ವಿಶ್ವವಿದ್ಯಾನಿಲಯದ ಉಲ್ಲೇಖ (2)ರ ಪತ್ರಕ್ಕನುಗುಣವಾಗಿ ಸರ್ಕಾರದ ಪತ್ರ ಸಂಃ ಇಡಿ/148/ಯುಎನ್ಇ/2023, ದಿನಾಂಕಃ 06.09.2023 ರಲ್ಲಿ "ಅಧೀಕ್ಷಕರ ಹುದ್ದೆಯನ್ನು ಸಹಾಯಕ ಅಭಿಯಂತರರು (ವಿದ್ಯುತ್) ಹುದ್ದೆಯನ್ನಾಗಿ ಪರಿವರ್ತಿಸಲು ಯಾವ ನಿಯಮಗಳಡಿ ಅವಕಾಶ ಕಲ್ಪಿಸಲಾಗಿದೆ ಎಂದು ಮಾಹಿತಿ ನೀಡಲು ನಿರ್ದೇಶಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕಃ 05.12.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### ನಿರ್ಣಯ

ಅಧೀಕ್ಷಕರ ಹುದ್ದೆಯನ್ನು ಸಹಾಯಕ ಅಭಿಯಂತರರ (ವಿದ್ಯುತ್) ಹುದ್ದೆಯನ್ನಾಗಿ ಪರಿವರ್ತಿಸುವ ಕುರಿತು ಸರ್ಕಾರದಿಂದ ಕೇಳಿರುವ ಮಾಹಿತಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಅಭಿವೃದ್ಧಿ ವಿಭಾಗ | |
| --- | --- |
| ವಿಷಯ ಸಂಖ್ಯೆ: | ಸಿಂ.03(a)/(12/23) |

# -ಃ ಟಿಪ್ಪಣಿ ಃ-

**ವಿಷಯಃ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಅಗತ್ಯವಿರುವ ಪೀಠೋಪಕರಣಗಳನ್ನು ಖರೀದಿಸಲು ಅನುಮೋದನೆ ನೀಡುವ ಕುರಿತು.**

*********

ವಿಶ್ವವಿದ್ಯಾನಿಲಯದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದಲ್ಲಿ ಕಛೇರಿಯ ದೈನಂದಿನ ಕೆಲಸ ಕಾರ್ಯಗಳಿಗೆ ಮತ್ತು ಪ್ರಾಧ್ಯಾಪಕರುಗಳಿಗೆ ಅಗತ್ಯವಾಗಿ ಬೇಕಾಗಿರುವ ಈ ಕೆಳಕಂಡ ಪೀಠೋಪಕರಣಗಳನ್ನು ಒದಗಿಸುವಂತೆ ವಿಭಾಗದ ಅಧ್ಯಕ್ಷರು ಮನವಿ ಸಲ್ಲಿಸಿರುತ್ತಾರೆ. ಆದ್ದರಿಂದ, ಈ ಕೆಳಕಂಡ ಪಿಠೋಪಕರಣಗಳನ್ನು ಖರೀದಿಸಲು ದಿನಾಂಕ:05.12.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

| ಕ್ರ.ಸಂ. | ಬೇಕಾಗಿರುವ ಸಾಮಗ್ರಿಗಳು | ಪ್ರಮಾಣ |
| --- | --- | --- |
| 1 | New Computer (Office Work) | 01 |
| 2 | Visitor Chairs | 06 |
| 3 | Museum Table | 10 |
| 4 | Officers Chairs (Professors) | 04 |
| 5 | Almera (Professor & Office) | 06 |
| 6 | Open Glass Window Almera (Internal Library) | 02 |
| 7 | Chairs & Table (Research Scholars) | 15 |

## ನಿರ್ಣಯ

ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಬೇಕಾಗಿರುವ ಈ ಮೇಲ್ಕಂಡ ಪೀಠೋಪಕರಣಗಳನ್ನು ದರಪಟ್ಟಿ/ Manual Tender ಕರೆದು ವಿಶ್ವವಿದ್ಯಾನಿಲಯದ ಹಣಕಾಸು ಲಭ್ಯತೆ ನೋಡಿಕೊಂಡು ನಿಯಮಾನುಸಾರ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಅಭಿವೃದ್ಧಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(b)/(10/23) |

## -ಃಟಿಪ್ಪಣಿಃ-

**ವಿಷಯಃ ವಿಶ್ವವಿದ್ಯಾನಿಲಯದ USIC ಕೇಂದ್ರಕ್ಕೆ UV-VIS Absorption Spectrophotometer ಉಪಕರಣ ಖರೀದಿಸಲು ಅನುಮತಿ ನೀಡುವ ಕುರಿತು.**

*****

ವಿಶ್ವವಿದ್ಯಾನಿಲಯದ ಎಲ್ಲಾ ವಿಜ್ಞಾನ ವಿಭಾಗಗಳ ಸಂಶೋಧನಾ ವಿದ್ಯಾರ್ಥಿಗಳಿಗೆ ಹಾಗೂ ಅಧ್ಯಾಪಕರುಗಳಿಗೆ ಸಂಶೋಧನಾ ಉದ್ದೇಶಕ್ಕಾಗಿ UV-VIS Absorption Spectrophotometer ವೈಜ್ಞಾನಿಕ ಉಪಕರಣವು ಅವಶ್ಯಕ ಹಾಗೂ ಉಪಕಯುಕ್ತವಾಗಿರುವುದರಿಂದ ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರುಗಳು ಸಂಶೋಧನಾ ಚಟುವಟಿಕೆಗಳನ್ನು ಕೈಗೊಳ್ಳಲು UV-VIS Absorption Spectrophotometer ಉಪಕರಣವನ್ನು ಒದಗಿಸುವಂತೆ - ನಿರ್ದೇಶಕರು, ವಿಶ್ವವಿದ್ಯಾನಿಲಯ ವೈಜ್ಞಾನಿಕ ಉಪಕರಣ ಕೇಂದ್ರ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ ಇವರು ಮನವಿ ಸಲ್ಲಿಸಿರುತ್ತಾರೆ.

ಆದ್ದರಿಂದ, ವಿಶ್ವವಿದ್ಯಾನಿಲಯ ವೈಜ್ಞಾನಿಕ ಉಪಕರಣ ಕೇಂದ್ರ, (USIC) ದಲ್ಲಿ ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರುಗಳು ಸಂಶೋಧನಾ ಚಟುವಟಿಕೆಗಳನ್ನು ಕೈಗೊಳ್ಳಲು UV-VIS Absorption Spectrophotometer ಉಪಕರಣದ ಅಂದಾಜು ಮೊತ್ತ: 7.00 ಲಕ್ಷ ಹಾಗೂ GST ಸೇರಿದಂತೆ ಇ-ಟೆಂಡರ್ ಮೂಲಕ ಖರೀದಿಸಲು ಹಾಗೂ Thermostat ನ ಅಂದಾಜು ಮೊತ್ತ: 80,000 ಹಾಗೂ GST ಸೇರಿದಂತೆ ಮ್ಯಾನುಯಲ್ ಟೆಂಡರ್ ಮೂಲಕ ಖರೀದಿಸಲು ದಿನಾಂಕ:05.12.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯ ವೈಜ್ಞಾನಿಕ ಉಪಕರಣ ಕೇಂದ್ರ, (USIC) ಕ್ಕೆ UV-VIS Absorption Spectrophotometer ಉಪಕರಣದ ಅಂದಾಜು ಮೊತ್ತ: 7.00 ಲಕ್ಷ ಹಾಗೂ GST ಸೇರಿದಂತೆ ಇ-ಟೆಂಡರ್ ಮೂಲಕ ಖರೀದಿಸಲು ಹಾಗೂ Thermostat ನ ಅಂದಾಜು ಮೊತ್ತ:80,000 ಹಾಗೂ GST ಸೇರಿದಂತೆ ಮ್ಯಾನುಯಲ್ ಟೆಂಡರ್ ಮೂಲಕ ವಿಶ್ವವಿದ್ಯಾನಿಲಯದ ಹಣಕಾಸು ಲಭ್ಯತೆ ನೋಡಿಕೊಂಡು ಖರೀದಿಸಲು ಸಭೆಯು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಅಭಿವೃದ್ಧಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(c)/(10/23) |

## –:ಟಿಪ್ಪಣಿ:–

ವಿಷಯ: ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ವಿದ್ಯಾರ್ಥಿನಿಲಯಗಳು, ಕ್ಯಾಂಟೀನ್ ಮತ್ತು ಜೆರಾಕ್ಸ್ ಮಳಿಗೆಗಳಿಗೆ ಬಾಡಿಗೆ ನಿಗದಿಪಡಿಸುವ ಕುರಿತು.

*****

2023–24ನೇ ಸಾಲಿಗೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ವಿದ್ಯಾರ್ಥಿನಿಲಯಗಳಿಗೆ, ಕ್ಯಾಂಟೀನ್ ಮತ್ತು ಜೆರಾಕ್ಸ್ ಮಳಿಗೆಗಳಿಗೆ ಬಾಡಿಗೆ ಆಧಾರದ ಮೇಲೆ ಟೆಂಡರ್ ಕರೆಯಲಾಗಿತ್ತು. ಸದರಿ ಟೆಂಡರ್‌ನಲ್ಲಿ 03 ಸಂಸ್ಥೆಯವರು ಮಾತ್ರ ಭಾಗವಹಿಸಿದ್ದರಿಂದ ಉಳಿದ ಈ ಕೆಳಕಂಡ ಮಳಿಗೆಗಳಿಗೆ 2ನೇ ಟೆಂಡರ್ ಕರೆಯಲಾಗಿತ್ತು. ಆದರೆ, ಟೆಂಡರ್‌ನಲ್ಲಿ ಯಾರು ಭಾಗವಹಿಸಿರುವುದಿಲ್ಲ. ಆದ್ದರಿಂದ, ಬಾಡಿಗೆಯನ್ನು ಪರಿಷ್ಕರಿಸಲಾಗಿದ್ದು ಹಾಗೂ ಕೆಲವು ಷರತ್ತುಗಳನ್ನು ಸಡಿಲಗೊಳಿಸಿ 10 ತಿಂಗಳ ಮುಂಚೆ ಬಿಟ್ಟು ಹೋಗುವಂತಿಲ್ಲ ಎಂಬ ಷರತ್ತಿಗೊಳಪಡಿಸಿರುವ ಕುರಿತು ದಿನಾಂಕ:05.12.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

| ಕ್ರಸಂ | ವಿದ್ಯಾರ್ಥಿನಿಲಯಗಳ ಹೆಸರು | ಮೆಸ್ ಬಿಲ್ ನಿಗದಿಪಡಿಸಿದ್ದು | ಪರಿಷ್ಕರಿಸಬೇಕಾದ ಮೆಸ್ ಬಿಲ್ | ಬಾಡಿಗೆ ನಿಗದಿಪಡಿಸಿದ್ದು | ಪರಿಷ್ಕರಿಸಬೇಕಾದ ಬಾಡಿಗೆ ಮೊತ್ತ |
|---|---|---|---|---|---|
| 01 | ಪುರುಷ ವಿದ್ಯಾರ್ಥಿ ನಿಲಯಗಳಿಗೆ | ರೂ.65/– +GST | ರೂ.85/– +GST | ಮಾಹೆ ರೂ.7000/– | ರೂ. 5000/–ಕ್ಕೆ ನಿಗದಿಪಡಿಸಬಹುದು |
| 02 | ಮಹಿಳಾ ವಿದ್ಯಾರ್ಥಿ ನಿಲಯಗಳಿಗೆ | ರೂ.60/– +GST | ರೂ.75/– +GST | ಮಾಹೆ ರೂ.7000/– | ರೂ.5000/–ಕ್ಕೆ ನಿಗದಿಪಡಿಸಬಹುದು |
| 03 | ಕ್ಯಾಂಟಿನ್ (ವಿಶ್ವವಿದ್ಯಾನಿಲಯದ ಆವರಣ) | – | – | ಮಾಹೆ ರೂ.15000/– | ರೂ.10,000/–ಕ್ಕೆ ನಿಗದಿಪಡಿಸಬಹುದು |
| 04 | <u>ಪಿ.ಜಿ. ಸೆಂಟರ್</u> ಪುರುಷ ವಿದ್ಯಾರ್ಥಿ ನಿಲಯ | ರೂ.65/– +GST | ರೂ.85/– +GST | ಮಾಹೆ ರೂ. 5000/– | ರೂ.2000/–ಕ್ಕೆ ನಿಗದಿಪಡಿಸಬಹುದು |
| | ಮಹಿಳಾ ವಿದ್ಯಾರ್ಥಿ ನಿಲಯ | ರೂ.60/– +GST | ರೂ.75/– +GST | ಮಾಹೆ ರೂ.5000/– | ರೂ.2000/–ಕ್ಕೆ ನಿಗದಿಪಡಿಸಬಹುದು |
| | ಕ್ಯಾಂಟಿನ್ & ಜೆರಾಕ್ಸ್ ಮಳಿಗೆ | – | – | ನಿಗದಿಪಡಿಸಿರುವುದಿಲ್ಲ | ರೂ.2000/–ಕ್ಕೆ ನಿಗದಿಪಡಿಸಬಹುದು |

### ಇ.ಎಂ.ಡಿ ಮೊತ್ತ

| ಕ್ರಸಂ | ಹೆಸರು | ನಿಗಧಿಪಡಿಸಿದ್ದು | ಪರಿಷ್ಕರಿಸಬೇಕಾದ ಇ.ಎಂ.ಡಿ ಮೊತ್ತ |
|---|---|---|---|
| 01 | ವಿದ್ಯಾರ್ಥಿ ನಿಲಯಗಳಿಗೆ | ರೂ.1,50,000/– | ರೂ.1,00,000/– ನಿಗದಿಪಡಿಸಬಹುದು |
| 02 | ಕ್ಯಾಂಟಿನ್‌ಗೆ | ರೂ.1,50,000/– | ರೂ.1,00,000/– ನಿಗದಿಪಡಿಸಬಹುದು |

### ನಿರ್ಣಯ

2023–24ನೇ ಸಾಲಿಗೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ವಿದ್ಯಾರ್ಥಿನಿಲಯಗಳು, ಕ್ಯಾಂಟೀನ್ ಮತ್ತು ಜೆರಾಕ್ಸ್ ಮಳಿಗೆಗಳಿಗೆ ಕೆಲವು ಷರತ್ತುಗಳನ್ನು ಸಡಿಲಗೊಳಿಸಿ ಈ ಮೇಲ್ಕಂಡಂತೆ ಪರಿಷ್ಕರಿಸಲಾದ ಮೆಸ್ ಬಿಲ್, ಬಾಡಿಗೆ ಮೊತ್ತ ಹಾಗೂ ಇ.ಎಂ.ಡಿ. ಮೊತ್ತವನ್ನು ನಿಗದಿಪಡಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.04(a)/(12/23) |

## –ಃ ಟಿಪ್ಪಣಿ ಃ–

ವಿಷಯಃ ವಿಶ್ವವಿದ್ಯಾನಿಲಯದ 2023–24ನೇ ಶೈಕ್ಷಣಿಕ ಸಾಲಿನ ಎಂ.ಕಾಂ. ಪದವಿಯ ಪ್ರವೇಶಾತಿಗೆ ಹೆಚ್ಚುವರಿ ಸೀಟ್ ಮ್ಯಾಟ್ರಿಕ್ಸ್‌ಗೆ ಘಟನೋತ್ತರ ಅನುಮೋದನೆ ನೀಡುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:18.11.2023

*********

ವಿಶ್ವವಿದ್ಯಾನಿಲಯದ 2023–24ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗೆ ಸಂಬಂಧಿಸಿದಂತೆ – ಅಧ್ಯಕ್ಷರು, ಸ್ನಾತಕೋತ್ತರ ಎಂ.ಕಾಂ. ಅಧ್ಯಯನ ವಿಭಾಗ – ಇವರು ಪ್ರವೇಶಾತಿ ಮಿತಿಯ ನಿಗದಿಪಡಿಸುವಿಕೆ ಕುರಿತು 2022–23ನೇ ಶೈಕ್ಷಣಿಕ ಸಾಲಿನಲ್ಲಿ ಅನುಮೋದಿಸಿರುವಂತೆಯೇ, 2023–24ನೇ ಶೈಕ್ಷಣಿಕ ಅವಧಿಗೂ ಹೆಚ್ಚುವರಿ ಸೀಟುಗಳಿಗೆ ಪ್ರವೇಶ ಮಿತಿಯನ್ನು ನಿಗದಿಪಡಿಸುವಂತೆ ಪರಿಷ್ಕೃತ ಪ್ರಸ್ತಾವಿತ ಸೀಟ್ ಮ್ಯಾಟ್ರಿಕ್ಸ್‌ನ್ನು ಸಿದ್ಧಪಡಿಸಿ ಅನುಮೋದನೆ ಸಲ್ಲಿಸಿರುತ್ತಾರೆ.

ಸದರಿ ಎಂ.ಕಾಂ. ಪದವಿ ಅಧ್ಯಯನ ಆಸಕ್ತ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯ ಆಧಾರದ ಮೇಲೆ 2023–24ನೇ ಶೈಕ್ಷಣಿಕ ಸಾಲಿಗೂ ಪ್ರಸ್ತಾವಿತ ಸೀಟ್ ಮ್ಯಾಟ್ರಿಕ್ಸ್‌ನ್ನು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ನಿಯಮಗಳನುಸಾರ ಮುಂದುವರಿಸಲಾಗಿದೆ. ಆದ್ದರಿಂದ, ಈ ಕೆಳಕಂಡ ಸೀಟ್ ಮ್ಯಾಟ್ರಿಕ್ಸ್‌ನ್ನು ದಿನಾಂಕ:05.12.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

### Revised Merit Seat Matrix - 2023-24

| Sl. No | Centre | GM (44%) | SC (17%) | ST (7%) | C1 (4%) | 2A (15%) | 2B (4%) | 3A (4%) | 3B (5%) | KM | NSS | NCC | SG | SP | DQ | PH | OU | HK | TOTAL |
|---|---|---|---|---|---|---|---|---|---|---|---|---|---|---|---|---|---|---|---|
| 1 | Shivaganogtri Main Campus | 29 | 11 | 04 | 02 | 09 | 02 | 02 | 03 | 01 | 01 | 01 | 01 | 01 | 01 | 01 | 09 | 05 | 83 |
| 2 | P.G.CENTRE. Jnanagangotri Chitradurga | 13 | 06 | 02 | 01 | 05 | 01 | 01 | 02 | 01 | 01 | 01 | 01 | 01 | 01 | 01 | 05 | 03 | 46 |

### Revised Open Merit Seat Matrix 2023-24

| Sl. No | Centre | GM (44%) | SC (17%) | ST (7%) | C1 (4%) | 2A (15%) | 2B (4%) | 3A (4%) | 3B (5%) | OU (15%) | HK (8%) | TOTAL |
|---|---|---|---|---|---|---|---|---|---|---|---|---|
| 1 | Shivaganogtri Main Campus | 39 | 15 | 06 | 04 | 13 | 04 | 04 | 04 | 13 | 07 | 109 |
| 2 | P.G.CENTRE. Jnanagangotri Chitradurga | 33 | 12 | 05 | 03 | 11 | 03 | 03 | 04 | 11 | 06 | 91 |

### ನಿರ್ಣಯ

2022–23ನೇ ಶೈಕ್ಷಣಿಕ ಸಾಲಿನಲ್ಲಿ ಅನುಮೋದಿಸಿರುವಂತೆಯೇ, ವಿಶ್ವವಿದ್ಯಾನಿಲಯದ 2023–24ನೇ ಶೈಕ್ಷಣಿಕ ಸಾಲಿನ ಎಂ.ಕಾಂ. ಪದವಿಯ ಪ್ರವೇಶಾತಿಗೆ ಸಂಬಂಧಿಸಿದಂತೆ ಈ ಮೇಲ್ಕಂಡ ಹೆಚ್ಚುವರಿ ಸೀಟ್ ಮ್ಯಾಟ್ರಿಕ್ಸ್ ಮುಂದುವರೆಸಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.04(b)/(12/23) |

## -: ಟಿಪ್ಪಣಿ :-

ವಿಷಯಃ **2023-24ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ವಿಜ್ಞಾನ ನಿಕಾಯದ ಕೆಲವು ಸ್ನಾತಕೋತ್ತರ ಅಧ್ಯಯನ ವಿಭಾಗಗಳ Merit ಹಾಗೂ EFS ಸೀಟುಗಳ ಪ್ರವೇಶ ಮಿತಿ ಹೆಚ್ಚಿಸಿರುವ ಕುರಿತು.**

ಉಲ್ಲೇಖ: 1. ದಿನಾಂಕ:30.10.2023ರಂದು ನಡೆದ ಡೀನರ/ ವಿಭಾಗಗಳ ಮುಖ್ಯಸ್ಥರುಗಳ ಸಭೆಯ ನಿರ್ಣಯ.

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:18.11.2023.

*********

2023-24ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ಪದವಿಗಳ ಪ್ರವೇಶಾತಿಗೆ ಸಂಬಂಧಿಸಿದಂತೆ – ವಿಶ್ವವಿದ್ಯಾನಿಲಯದ ಮುಖ್ಯ ಆವರಣದಲ್ಲಿರುವ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದಡಿಯಲ್ಲಿರುವ ಭೌತಶಾಸ್ತ್ರ, ರಸಾಯನಶಾಸ್ತ್ರ ಹಾಗೂ ಗಣಿತಶಾಸ್ತ್ರ ಅಧ್ಯಯನ ವಿಭಾಗಗಳ Merit ಹಾಗೂ Enhanced Fees Structure ಸೀಟುಗಳ ಪ್ರವೇಶಾತಿಗೆ ಸಂಬಂಧಪಟ್ಟಂತೆ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಸ್ವೀಕೃತಗೊಂಡಿರುವ ಹಿನ್ನೆಲೆಯಲ್ಲಿ ಈಗಾಗಲೇ ಪ್ರವೇಶಾತಿ ಪುಸ್ತಕದಲ್ಲಿ ನಿಗದಿಪಡಿಸಿರುವ ಸೀಟುಗಳನ್ನು ಹೆಚ್ಚಿಸುವಂತೆ ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರುಗಳು ಉಲ್ಲೇಖ(1)ರ ಸಭೆಯಲ್ಲಿ ಚರ್ಚಿಸಿರುತ್ತಾರೆ. ಈ ಕುರಿತು ಮಾನ್ಯ ಕುಲಪತಿಗಳು ಹಾಗೂ ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಇವರುಗಳ ಶಿಫಾರಸ್ಸಿನೊಂದಿಗೆ – ಸದರಿ ವಿಭಾಗಗಳ ಪ್ರವೇಶ ಮಿತಿಯನ್ನು ಈ ಕೆಳಕಂಡಂತೆ ಹೆಚ್ಚುವರಿಯಾಗಿ ನಿಗದಿಪಡಿಸಿ 2023-24ನೇ ಶೈಕ್ಷಣಿಕ ಸಾಲಿಗೆ ಮಾತ್ರ ಅನ್ವಯಿಸುತ್ತದೆಂದು ತಿಳಿಸಿ ಅಧಿಸೂಚಿಸಲಾಗಿದೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:05.12.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

| ಕ್ರ. ಸಂ. | ಸ್ನಾತಕೋತ್ತರ ವಿಭಾಗಗಳು | ಮೆರಿಟ್ ಸೀಟುಗಳು | | Enhanced Fees Structure ಸೀಟುಗಳು | |
|---|---|---|---|---|---|
| | | 2022-23 | 2023-24 | 2022-23 | 2023-24 |
| 1 | ರಸಾಯನಶಾಸ್ತ್ರ | 46 | 65 | 20 | 58 |
| 2 | ಗಣಿತಶಾಸ್ತ್ರ | 46 | 65 | 25 | 58 |
| 3 | ಭೌತಶಾಸ್ತ್ರ | 46 | 65 | 20 | 58 |

### ನಿರ್ಣಯ

2023-24ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ವಿಜ್ಞಾನ ನಿಕಾಯದ ಮುಖ್ಯ ಆವರಣದಲ್ಲಿರುವ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದಡಿಯಲ್ಲಿರುವ ಸ್ನಾತಕೋತ್ತರ ಭೌತಶಾಸ್ತ್ರ, ರಸಾಯನಶಾಸ್ತ್ರ ಹಾಗೂ ಗಣಿತಶಾಸ್ತ್ರ ಅಧ್ಯಯನ ವಿಭಾಗಗಳಿಗೆ Merit ಹಾಗೂ EFS ಸೀಟುಗಳನ್ನು ಈ ಮೇಲ್ಕಂಡಂತೆ ಹೆಚ್ಚುವರಿಯಾಗಿ ನಿಗದಿಪಡಿಸಿರುವುದನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.04(c)/(12/23) |

## -: ಟಿಪ್ಪಣಿ :-

**ವಿಷಯ: ವಿಶ್ವವಿದ್ಯಾನಿಲಯದ 2023-24ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ಪದವಿಗಳ ಶುಲ್ಕ ತಃಖ್ತೆಗೆ (Fees Structure) ಘಟನೋತ್ತರ ಅನುಮೋದನೆ ನೀಡುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:18.11.2023.

*********

ವಿಶ್ವವಿದ್ಯಾನಿಲಯ ವ್ಯಾಪ್ತಿಯ ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಹಾಗೂ ವಿಶ್ವವಿದ್ಯಾನಿಲಯ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕೋತ್ತರ ಪದವಿ ಕಾಲೇಜುಗಳ ಪ್ರವೇಶಾತಿಗೆ ಸಂಬಂಧಿಸಿದಂತೆ, 2023-24ನೇ ಸಾಲಿನ ಪ್ರವೇಶ ಪುಸ್ತಕ ತಯಾರಿ ಸಮಿತಿಯ ನಿರ್ಣಯದನುಸಾರ ನಿಗಪಡಿಸಲಾಗಿರುವ ಶುಲ್ಕ ತಃಖ್ತೆಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ. ಸದರಿ ಶುಲ್ಕ ತಃಖ್ತೆಯನುಸಾರ 2023-24ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಪ್ರಕ್ರಿಯೆಯನ್ನು ಜರುಗಿಸಿರುವುದಕ್ಕೆ ದಿನಾಂಕ:05.12.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕೋತ್ತರ ಪದವಿ ಕಾಲೇಜುಗಳ ಪ್ರವೇಶಾತಿಗೆ ಸಂಬಂಧಿಸಿದಂತೆ, 2023-24ನೇ ಸಾಲಿನ ಪ್ರವೇಶ ಪುಸ್ತಕ ತಯಾರಿ ಸಮಿತಿಯ ನಿರ್ಣಯದನುಸಾರ ನಿಗಪಡಿಸಲಾಗಿರುವ ಶುಲ್ಕ ತಃಖ್ತೆ (Fees Structure)ಯನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿತು.

ಮುಂದುವರೆದು, ಮುಂದಿನ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ ಮೆರಿಟ್ ಸೀಟುಗಳಿಗೆ ಶುಲ್ಕ ಪರಿಷ್ಕರಣೆಗೊಳಿಸಿ ಶುಲ್ಕ ನಿಗದಿಗೊಳಿಸಲು ಸಮಿತಿಯನ್ನು ರಚಿಸಲು ಸಭೆಯು ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.04(d)/(12/23) |

## –: ಟಿಪ್ಪಣಿ :–

**ವಿಷಯಃ ವಿಶ್ವವಿದ್ಯಾನಿಲಯದ 2023–24ನೇ ಶೈಕ್ಷಣಿಕ ಸಾಲಿನ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಂದ ಶುಲ್ಕ ಪಾವತಿಸಿಕೊಳ್ಳದಿರುವ ಕುರಿತು.**

ಉಲ್ಲೇಖ:
1. ಸರ್ಕಾರದ ಉಪ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪತ್ರ ಸಂ:SWD/EDU/ED3/91/2023 (Com:1098854) ಬೆಂಗಳೂರು ದಿನಾಂಕ:03.07.2023.
2. ಸರ್ಕಾರದ ಉಪ ಕಾರ್ಯದರ್ಶಿಗಳು–2, (ಪ್ರ) ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪತ್ರ ಸಂ:ಸಕಇ–ಎಸ್‌ಟಿಪಿ/ 108/2023, ದಿನಾಂಕ:25.08.2023
3. ಪ್ರವೇಶಾತಿ ವಿವರಣಾ ಪುಸ್ತಕ ತಯಾರಿ ಸಮಿತಿ ನಿರ್ಣಯ ದಿನಾಂಕ: 12.09.2023.

*********

ವಿಶ್ವವಿದ್ಯಾನಿಲಯದ 2023–24ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ಪದವಿ ಪ್ರವೇಶಾತಿಗಳಿಗೆ ಸಂಬಂಧಿಸಿದಂತೆ, ಉಲ್ಲೇಖಿತ(1) ಹಾಗೂ (2)ರ ಸರ್ಕಾರದ ಆದೇಶಗಳನುಸಾರ – ದಿನಾಂಕ:12.09.2023ರಂದು ನಡೆದ ಪ್ರವೇಶಾತಿ ಪುಸ್ತಕ ತಯಾರಿ ಸಮಿತಿ ಹಾಗೂ ಎಲ್ಲಾ ಅಧ್ಯಯನ ವಿಭಾಗಗಳ ಅಧ್ಯಕ್ಷರು/ ಸಂಯೋಜನಾಧಿಕಾರಿಗಳ ಸಭೆಯ ತೀರ್ಮಾನದಂತೆ – 2023–24ನೇ ಸಾಲಿನ ಪ್ರವೇಶಾತಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಂದ ಯಾವುದೇ ಶುಲ್ಕವನ್ನು ಪಾವತಿಸಿಕೊಳ್ಳದಿರುವಂತೆ ನಿರ್ಣಯ ಕೈಗೊಳ್ಳಲಾಗಿದೆ. ಸದರಿ ವಿಷಯವನ್ನು ದಿನಾಂಕ:05.12.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

<u>ನಿರ್ಣಯ</u>

2023–24ನೇ ಸಾಲಿನ ಪ್ರವೇಶಾತಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಂದ ಯಾವುದೇ ಶುಲ್ಕವನ್ನು ಪಾವತಿಸಿಕೊಳ್ಳದಿರುವಂತೆ ಸರ್ಕಾರದ ಆದೇಶಗಳನುಸಾರ ಪ್ರವೇಶಾತಿ ವಿವರಣಾ ಪುಸ್ತಕ ತಯಾರಿಗೆ ಸಂಬಂಧಿಸಿದಂತೆ ದಿನಾಂಕ:12.09.2023 ರಂದು ನಡೆದ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

ಮುಂದುವರೆದು, ವಿದ್ಯಾರ್ಥಿಗಳು Freeship card ಮೂಲಕ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಬೇಕು. ವಿದ್ಯಾರ್ಥಿವೇತನ ಮೊತ್ತ ವಿದ್ಯಾರ್ಥಿ ಖಾತೆಗೆ ಜಮೆಯಾದ ನಂತರದಲ್ಲಿ ವಿದ್ಯಾರ್ಥಿಯಿಂದ ಕಡ್ಡಾಯವಾಗಿ ಭರಿಸಿಕೊಳ್ಳುವುದು. ಈ ಕುರಿತು ವಿದ್ಯಾರ್ಥಿಗಳಿಂದ ಶುಲ್ಕ ಮುಚ್ಚಳಿಕೆ ಪತ್ರವನ್ನು ಪಡೆಯತಕ್ಕದ್ದು. ವಿದ್ಯಾರ್ಥಿಗಳು ಶುಲ್ಕ ಪಾವತಿ ಮಾಡದಿದ್ದಲ್ಲಿ ಪ್ರವೇಶಾತಿ ಸಂದರ್ಭದಲ್ಲಿ ಪಡೆದ ಮೂಲ ಅಂಕಪಟ್ಟಿಗಳನ್ನು ವಿದ್ಯಾರ್ಥಿಗೆ ಹಿಂತಿರುಗಿಸುವಂತಿಲ್ಲವೆಂದು ಸುತ್ತೋಲೆ ಹೊರಡಿಸಲು ಸಭೆಯು ನಿರ್ಣಯಿಸಿತು.

ಒಂದು ವೇಳೆ ಕಾರಣಾಂತರಗಳಿಂದ ವಿದ್ಯಾರ್ಥಿವೇತನ ಮಂಜೂರಾಗದಿದ್ದಲ್ಲಿ ವಿದ್ಯಾರ್ಥಿಗಳು ಪ್ರವೇಶಾತಿ ಸಂದರ್ಭದಲ್ಲಿ ಪಾವತಿಸಬೇಕಾದ ಪೂರ್ಣ ಶುಲ್ಕವನ್ನು ಭರಿಸಿಕೊಳ್ಳುವಂತೆ ಮುಚ್ಚಳಿಕೆ ಪತ್ರವನ್ನು ವಿದ್ಯಾರ್ಥಿಗಳಿಂದ ಪಡೆಯಲು ಸುತ್ತೋಲೆಯನ್ನು ಹೊರಡಿಸುವಂತೆ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(a)/(10/23) |

**–:ಟಿಪ್ಪಣಿ:–**

**ವಿಷಯಃ ದಿನಾಂಕ:10.11.2023 ರಂದು ವಿಶ್ವವಿದ್ಯಾನಿಲಯದಲ್ಲಿ ನಡೆದ ಕಟ್ಟಡ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದನೆಗಾಗಿ ಮಂಡಿಸಿರುವ ಕುರಿತು.**

*****

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:10.11.2023ರಂದು ವಿಶ್ವವಿದ್ಯಾನಿಲಯದ ಕಟ್ಟಡ ಸಮಿತಿ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿದ ವಿಷಯಗಳ ನಡಾವಳಿಗಳನ್ನು ದಿನಾಂಕ:05.12.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

<u>ನಿರ್ಣಯ</u>

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:10.11.2023ರಂದು ಏರ್ಪಡಿಸಲಾಗಿದ್ದ ಕಟ್ಟಡ ಸಮಿತಿ ಸಭೆಯ ನಡಾವಳಿಗಳ ಕುರಿತು ಚರ್ಚಿಸಿದ ನಂತರ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು    ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(b)/(10/23) |

## -:ಟಿಪ್ಪಣಿ:-

ವಿಷಯಃ **K.R.I.D.L, ದಾವಣಗೆರೆ ಹಾಗೂ KSPHC & IDCL ಬೆಂಗಳೂರು ಇವರಿಗೆ ಮುಂಗಡ ಠೇವಣಿ ವಂತಿಕೆ ಆಧಾರದ ಮೇಲೆ ಕಾಮಗಾರಿಗಳನ್ನು ಪೂರ್ಣಗೊಳಿಸಿದ ಬಾಕಿ ಅನುದಾನವನ್ನು ಪಾವತಿಸಲು ಅನುಮೋದನೆ ನೀಡುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿ ಕ್ರ.ಸಂ (01 ರಿಂದ 11) KRIDL - ದಾವಣಗೆರೆ ವಿಭಾಗ, ದಾವಣಗೆರೆ ಅದರಂತೆ ಕ್ರ.ಸಂ (12 ರಿಂದ 13) KSPHC & IDCL, Bangalore, ಇವರಿಂದ ಮುಂಗಡ ಠೇವಣಿ ವಂತಿಗೆ ಆಧಾರದ ಮೇಲೆ ಕಾಮಗಾರಿಗಳನ್ನು ಕೈಗೊಳ್ಳಲು ವಿಶ್ವವಿದ್ಯಾನಿಲಯದಿಂದ ಕ್ರಮ ಕೈಗೊಳ್ಳಲಾಗಿರುತ್ತದೆ. ಅದರಂತೆ ಸದರಿ ಸಂಸ್ಥೆಯವರು ಕಾಮಗಾರಿಗಳನ್ನು ಪೂರ್ಣಗೊಳಿಸಿ ವಿಶ್ವವಿದ್ಯಾನಿಲಯಕ್ಕೆ ಹಸ್ತಾಂತರಿಸಿ ಬಾಕಿ ಅನುದಾನ ಬಿಡುಗಡೆಗೊಳಿಸುವಂತೆ ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆಯುತ್ತಿರುತ್ತಾರೆ. ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸರಿಸುಮಾರು ಐದು ವರ್ಷ ಮೇಲ್ಪಟ್ಟಿದ್ದು ಸದರಿ ಸಂಸ್ಥೆಯವರಿಗೆ ಬಾಕಿ ಅನುದಾನ ಬಿಡುಗಡೆಗೊಳಿಸುವಂತೆ ಹಾಗೂ ಈ ಕೆಳಕಂಡ ಕಾಮಗಾರಿಗಳಿಗೆ ಘಟನೋತ್ತರ ಅನುಮತಿಗಾಗಿ ದಿನಾಂಕ:05.12.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

KSPHC&IDCL, Bangalore, KRIDL-Davangere, ಇವರುಗಳಿಗೆ ಬಾಕಿ ಪಾವತಿಸಬೇಕಾದ ಮೊತ್ತ ಈ ಕೆಳಕಂಡಂತಿದೆ.

| Sl. No. | Name of work | Estimate cost (Rs. in Lakhs) | Grants utilised (Rs. in Lakhs) | Grants Balance (Rs. in Lakhs) |
|---|---|---|---|---|
| 1 | Repairs and Renovation of MBA & SS Bldg in Davangere University, Shivagangotri, Davangere | 14.35 | 12.00 | 2.35 |
| 2 | Providing & fixing Octagonal pole & LED street lights to Davangere University, Shivagangotri, Davangere. | 60.51 | 50 | 10.51 |
| 3 | Providing Main circuit UG cable from Transformer center main panel to multipurpose Boys hostel and Indoor stadium at Shivagangotri campus, Davangere University, Davangere. | 38.65 | 32.98 | 5.67 |
| 4 | Providing Main Control panel board generator automatic charger panel& power compactor at various places at Shivagangotri, Davangere University, Davangere. | 28.45 | 22.50 | 5.95 |
| 5 | Construction of controlled power house at Shivagangotri, Davangere University, Davangere. | 12.70 | 12.50 | 0.20 |

ಮುಂದುವರೆದಿದೆ..

ಕುಲಸಚಿವರು

ಕುಲಪತಿಗಳು

| | | | | |
|---|---|---|---|---|
| 6 | Construction of Car shed and washing area to VC quarters in premises of Visual Arts College campus, Davangere University, Davangere. | 7.75 | 6.975 | 0.775 |
| 7 | Construction of Compound wall Balance length in North side compound wall (Beside Ladies hostel) at Shivagangotri, Davangere University, Davangere. | 6.90 | 6.21 | 0.69 |
| 8 | Construction of Rooms in First floor to Davangere University, Shivagangotri, Davangere. | 198.00 | 175.00 | 23.00 |
| 9 | Improvement and Asphalting to Internal Roads of Davangere University at Shivagangotri, Davangere. | 140.00 | 132.00 | 8.00 |
| 10 | Construction of Rooms in First Floor (South Block) to Davangere University at Shivagangotri, Davangere | 199.00 | 175.01 | 23.99 |
| 11 | Construction of Kitchen & Dining block at Davangere University, Shivagangotri, Davangere. | 199.00 | 189.00 | 10.00 |
| 12 | Construction of Academic Science building (1st floor) at Shivagangotri, Davangere University, Davangere. | 498.60 | 418.75 | 79.85 |
| 13 | Construction of Academic Social Science building(1st floor) at Shivagangotri, Davangere University, Davangere. | 498.60 | 418.75 | 79.85 |

## ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿ ಮುಂಗಡ ಠೇವಣಿ ವಂತಿಗೆ ಆಧಾರದ ಮೇಲೆ ಈ ಮೇಲ್ಕಂಡ ಕಾಮಗಾರಿಗಳನ್ನು ಪೂರ್ಣಗೊಳಿಸಿ ವಿಶ್ವವಿದ್ಯಾನಿಲಯಕ್ಕೆ ಹಸ್ತಾಂತರಿಸಿದ ಸಂಸ್ಥೆಗಳಾದ KRIDL - ದಾವಣಗೆರೆ ವಿಭಾಗ, ದಾವಣಗೆರೆ ಇವರಿಗೆ ಅಂದಾಜು 100.00 ಲಕ್ಷ ಹಾಗೂ KSPHC & IDCL, Bangalore,. ಇವರಿಗೆ 160.00 ಲಕ್ಷ ಒಟ್ಟು:260.00 ಲಕ್ಷಗಳ ಬಾಕಿ ಮೊತ್ತದ ಹಣವನ್ನು ಹಂತ-ಹಂತವಾಗಿ ವಿಶ್ವವಿದ್ಯಾನಿಲಯದ ಆರ್ಥಿಕ ಲಭ್ಯತೆಗನುಗುಣವಾಗಿ ಸದರಿ ಸಂಸ್ಥೆಯವರಿಗೆ ಬಿಡುಗಡೆ ಮಾಡಲು ಸಭೆಯು ಒಮ್ಮತದಿಂದ ಅನುಮೋದಿಸಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು | ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(c)/(10/23) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದ ಸ್ನಾತಕೋತ್ತರ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ಅಧ್ಯಯನ ವಿಭಾಗದಲ್ಲಿ ನವೀನ ಮಾದರಿಯ ಆಧುನಿಕ ಪ್ರಯೋಗಾಲಯಗಳನ್ನು ಸ್ಥಾಪಿಸುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿ ಸ್ನಾತಕೋತ್ತರ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ಅಧ್ಯಯನ ವಿಭಾಗದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ, ಸಂಶೋಧನಾರ್ಥಿಗಳಿಗೆ ಹಾಗೂ ಅಧ್ಯಾಪಕರುಗಳಿಗೆ ಉನ್ನತ ಮಟ್ಟದ ಸಂಶೋಧನೆ ಮಾಡಲು ಆಧುನಿಕ ಪ್ರಯೋಗಾಲಯಗಳನ್ನು ನಿರ್ಮಾಣ ಮಾಡಲು ಅಂದಾಜು ಮೊತ್ತ ರೂ.100.00 ಲಕ್ಷಗಳಿಗೆ ದಿನಾಂಕ:30.05.2023ರ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯಲಾಗಿತ್ತು. ಆದರೆ, ಈಗ ಸದರಿ ಅಂದಾಜು ಮೊತ್ತವನ್ನು ರೂ.120.00 ಲಕ್ಷಗಳಿಗೆ ಹೆಚ್ಚಿಸಲು ದಿನಾಂಕ:05.12.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿ ಸ್ನಾತಕೋತ್ತರ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ಅಧ್ಯಯನ ವಿಭಾಗದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ, ಸಂಶೋಧನಾರ್ಥಿಗಳಿಗೆ ಹಾಗೂ ಅಧ್ಯಾಪಕರುಗಳಿಗೆ ಉನ್ನತ ಮಟ್ಟದ ಸಂಶೋಧನೆ ಮಾಡಲು ಆಧುನಿಕ ಪ್ರಯೋಗಾಲಯಗಳನ್ನು ನಿರ್ಮಾಣ ಮಾಡಲು ಅಂದಾಜು ಮೊತ್ತವನ್ನು ರೂ.100.00 ಲಕ್ಷಗಳಿಂದ ರೂ.120.00 ಲಕ್ಷಗಳಿಗೆ ಹೆಚ್ಚಿಸಲು ಸಭೆಯು ಚರ್ಚಿಸಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(d)/(10/23) |

**-:ಟಿಪ್ಪಣಿ:-**

ವಿಷಯಃ **"Digital Education System for Davangere University" Davangere ಎಂಬ ಆಧುನಿಕ ತಂತ್ರಜ್ಞಾನ ಒಳಗೊಂಡ ಶಿಕ್ಷಣ ವ್ಯವಸ್ಥೆಯನ್ನು ವಿಶ್ವವಿದ್ಯಾನಿಲಯದಲ್ಲಿ ಜಾರಿಗೆ ತರುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಮೊಟ್ಟ ಮೊದಲ ಬಾರಿಗೆ ಆಧುನಿಕ ತಂತ್ರಜ್ಞಾನ ಒಳಗೊಂಡ ಶಿಕ್ಷಣ ವ್ಯವಸ್ಥೆಯನ್ನು "Digital Education System for Davangere University" ಎಂಬ ಪರಿಕಲ್ಪನೆಯೊಂದಿಗೆ ವಿಶ್ವವಿದ್ಯಾನಿಲಯ ತಾಂತ್ರಿಕ ಸಮಿತಿಯು ದಿನಾಂಕ:02-12-2023ರಂದು ಈ ಕೆಳಕಂಡ ಅಂಶಗಳ ಬಗ್ಗೆ ಪರಿಶೀಲಿಸಿ ಚರ್ಚಿಸಿಲಾಯಿತು.

a) Establishing Private cloud/ Data Center at University Campus.
b) Data Centre Act as hub for the Virtual University.
c) Dedicated Servers and Hardwares to be provided to Establish Virtual University.
d) LMS to be provided through portal for all Students of Davangere University This will be more than 100000+licena per annual
e) Developing of E-books and E-journals.
f) Setting of Digital Studio Class Room.
g) Digital Rights management and Digital Asset Management for University.
h) Setting up as incubator which will consist of high computing computer which will have simulating Software installed.

ಈ ಮೇಲಿನ ಎಲ್ಲಾ ವ್ಯವಸ್ಥೆಗಳನ್ನೊಳಗೊಂಡ "Digital Education System" ಜಾರಿಗೆ ತರಲು ಅಂದಾಜು ಮೊತ್ತ ರೂ.30.00 ಕೋಟಿಗಳಷ್ಟು ಅವಶ್ಯಕತೆ ಇದ್ದು ಸದರಿ ವಿಷಯಕ್ಕೆ ಸಂಬಂಧಿಸಿದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಹಾಗೂ ಅನುದಾನವನ್ನು ಕೋರಿ ಸರ್ಕಾರಕ್ಕೆ ಪತ್ರಿಸಲು ದಿನಾಂಕ:05.12.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ**

"Digital Education System for Davangere University" ಎಂಬ "Digital Education System" ನ ಕುರಿತು ಸಂಪೂರ್ಣ ಮಾಹಿತಿಯನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಈ ತಂತ್ರಜ್ಞಾನವನ್ನು ಜಾರಿಗೆ ತಂದಲ್ಲಿ ಆಧುನಿಕ ತಂತ್ರಜ್ಞಾನ ಒಳಗೊಂಡ ಶಿಕ್ಷಣ ನೀಡುವಲ್ಲಿ ಮೊಟ್ಟಮೊದಲ ವಿಶ್ವವಿದ್ಯಾನಿಲಯ ಎಂಬ ಹೆಗ್ಗಳಿಕೆ ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಲಭಿಸುವುದು.

ಈ ವ್ಯವಸ್ಥೆಯನ್ನು ಜಾರಿಗೆ ತರಲು ಅಂದಾಜು ಮೊತ್ತ ರೂ.30.00 ಕೋಟಿಗಳಷ್ಟು ಅವಶ್ಯಕತೆ ಇದ್ದು, ಸುಧೀರ್ಘ ಚರ್ಚೆಯ ನಂತರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಹಾಗೂ ಅನುದಾನವನ್ನು ಕೋರಿ ಸರ್ಕಾರಕ್ಕೆ ಪತ್ರಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(e)/(10/23) |

**-:ಟಿಪ್ಪಣಿ:-**

**ವಿಷಯ:** **ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯ ಆವರಣದಲ್ಲಿನ ಮಾನ್ಯ ಕುಲಪತಿಗಳ ವಸತಿ ಗೃಹಕ್ಕೆ** Hiresolution Computer System, Printer **ಮತ್ತು** 05 KVA UPS **ಖರೀದಿಸುವ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯ ಆವರಣದಲ್ಲಿನ ಮಾನ್ಯ ಕುಲಪತಿಗಳ ವಸತಿ ಗೃಹಕ್ಕೆ Hiresolution Computer System(Dell Optiplex, Core i7, 8GB RAM, 512MB SSD, Hard Disk, 19.5" TFT, Windows 10), Printer (Canon) ಮತ್ತು 05 KVA UPS ಅವಶ್ಯಕತೆ ಇದ್ದು, ಇವುಗಳ ಅಂದಾಜು ಮೊತ್ತ ರೂ. 5.00 ಲಕ್ಷ ಇದ್ದು ದರಪಟ್ಟಿಗಳ ಆಧಾರದ ಮೇಲೆ ಅವುಗಳನ್ನು ಖರೀದಿಸಲು ದಿನಾಂಕ:05.12.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

<u>ನಿರ್ಣಯ</u>

ಮಾನ್ಯ ಕುಲಪತಿಗಳ ವಸತಿ ಗೃಹಕ್ಕೆ Hiresolution Computer System(Dell Optiplex, Core i7, 8GB RAM, 512MB SSD, Hard Disk, 19.5" TFT, Windows 10), Printer (Canon) ಮತ್ತು 05 KVA UPS ಗಳನ್ನು ಅಂದಾಜು ಮೊತ್ತ ರೂ.5.00 ಲಕ್ಷದೊಳಗೆ ದರಪಟ್ಟಿ ಆಧಾರದ ಮೇಲೆ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು | ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(a)/(12/23) |

## –: ಟಿಪ್ಪಣಿ :–

**ವಿಷಯ: ದಿನಾಂಕ:20.11.2023 ರಂದು ಜರುಗಿದ 2ನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳಿಗೆ ಅನುಮೋದನೆ ನೀಡುವ ಕುರಿತು.**

*********

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇಲ್ಲಿ ದಿನಾಂಕ:20.11.2023 ರಂದು ಜರುಗಿದ ವಿಶ್ವವಿದ್ಯಾನಿಲಯದ 2023–24ನೇ ಆರ್ಥಿಕ ವರ್ಷದ 2ನೇ ಹಣಕಾಸು ಸಮಿತಿ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳ ನಡಾವಳಿಗಳನ್ನು ದಿನಾಂಕ:05.12.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

<u>ನಿರ್ಣಯ</u>

ವಿಶ್ವವಿದ್ಯಾನಿಲಯದ 2023–24ನೇ ಆರ್ಥಿಕ ವರ್ಷದ ಎರಡನೇ ಹಣಕಾಸು ಸಮಿತಿ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳ ಕುರಿತು ಸಭೆಯು ಕೂಲಂಕುಶವಾಗಿ ಚರ್ಚಿಸಿದ ಬಳಿಕ ನಡಾವಳಿಗಳನ್ನು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.07(a)/(12/23) |

## –: ಟಿಪ್ಪಣಿ :–

**ವಿಷಯ: ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಪರೀಕ್ಷೆ ಫಲಿತಾಂಶ ನೀಡಲು ಮೆ॥ ಲಾಜಿಸಿಸ್ & ಮೆ॥ ಯುನಿಕ್ಲೇರ್ ಸಂಸ್ಥೆಯವರು ದರ ನಿಗದಿಪಡಿಸಿರುವ ಬಗ್ಗೆ.**

ಉಲ್ಲೇಖ: 1. ದಿನಾಂಕ:07.10.2023 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ
2. ಈ ಕಛೇರಿ ಪತ್ರ ಸಂಖ್ಯೆ:ದಾವಿ:ಪವಿ:ಎಂ.ಪಿ.ಐ.ಸಿ:2023–24/3761 ದಿನಾಂಕ:06.11.2023
3. ಮೆ॥ ಲಾಜಿಸಿಸ್ ಮತ್ತು ಮೆ॥ ಯುನಿಕ್ಲೇರ್ ಸಂಸ್ಥೆಯ ಮನವಿ ದಿನಾಂಕ:20.11.2023

*********

ನವೆಂಬರ್/ ಡಿಸೆಂಬರ್–2018ರ ಮಾಹೆಯಲ್ಲಿ ಪರೀಕ್ಷಾ ತಂತ್ರಾಂಶಕ್ಕೆ ಸಂಬಂಧಿಸಿದ ಕಾರ್ಯಗಳಿಗಾಗಿ ನಿಯಮಾನುಸಾರ ಮೆ॥ ಲಾಜಿಸಿಸ್ (ಸಾಫ್ಟ್‌ವೇರ್), ಮತ್ತು ಮೆ॥ ಯುನಿಕ್ಲೇರ್ ಇವರ ಸಂಸ್ಥೆಯೊಂದಿಗೆ 5 ವರ್ಷಗಳ ಅವಧಿಯವರೆಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಆದರೆ ಸದರಿ ಕರಾರು ಅವಧಿಯು ಅಕ್ಟೋಬರ್–2023ರ ಅಂತ್ಯಕ್ಕೆ ಮುಕ್ತಾಯಗೊಂಡಿರುತ್ತದೆ. ಆದರೆ ಇದುವರೆಗೂ ಸುಮಾರು 6,500 ಅನುತ್ತೀರ್ಣಗೊಂಡ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು & ಫಲಿತಾಂಶ ಪ್ರಕಟಿಸಲು ದಿನಾಂಕ:07.10.2023ರ ಸಿಂಡಿಕೇಟ್ ನಿರ್ಣಯನುಸಾರ ಉಲ್ಲೇಖ(2)ರ ಪತ್ರದಲ್ಲಿ ಒಂದು ವರ್ಷದ ಅವಧಿಯವರೆಗೆ ಸದರಿ ಸಂಸ್ಥೆಗಳ ಸೇವೆಯನ್ನು ಮುಂದುವರೆಸಲು ಆದೇಶ ನೀಡಲಾಗಿರುತ್ತದೆ.

ಸದರಿ ಆದೇಶಕ್ಕನುಗುಣವಾಗಿ ಹಾಗೂ ಮೆ॥ ಲಾಜಿಸಿಸ್ ಸಂಸ್ಥೆಯವರು ಒಂದು ವಿದ್ಯಾರ್ಥಿಗೆ ರೂ.400–00 ರಂತೆ ಮೆ॥ ಯುನಿಕ್ಲೇರ್ ಸಂಸ್ಥೆಯವರು ಒಂದು ವಿದ್ಯಾರ್ಥಿಗೆ ರೂ.270–00 ರಂತೆ ನಿಗದಿಪಡಿಸಿರುತ್ತಾರೆ.

ಈ ಬಗ್ಗೆ ಚರ್ಚಿಸಿ ನಿರ್ಣಯಿಸಲು ದಿನಾಂಕ:05.12.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯವು ಮೇಲೆ ನಮೂದಿಸಿದ ಸಂಸ್ಥೆಯವರಿಂದ 2018–2023ರ ವರೆಗೆ 05 ವರ್ಷಗಳ ಅವಧಿಗೆ ಕರಾರು ಒಪ್ಪಂದ ಮಾಡಿಕೊಂಡು ಯು.ಜಿ. ಸ್ನಾತಕ ಪದವಿಯ ಪರೀಕ್ಷಾ ಫಲಿತಾಂಶವನ್ನು ನೀಡುವ ಜವಬ್ದಾರಿಯನ್ನು ಸಂಸ್ಥೆಯವರಿಗೆ ನೀಡಲಾಗಿತ್ತು. ಆದರೆ, ಸಂಸ್ಥೆಯವರ ಕರಾರು ಅವಧಿ ಅಕ್ಟೋಬರ್–2023ಕ್ಕೆ ಮುಕ್ತಾಯಗೊಂಡಿರುವುದರಿಂದ, ಸದರಿ ವಿಷಯವನ್ನು ದಿನಾಂಕ:07.10.2023ರ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿ 01 ವರ್ಷದ ಅವಧಿಯವರೆಗೆ ಸದರಿ ಸಂಸ್ಥೆಗಳ ಸೇವೆಯನ್ನು ಮುಂದುವರೆಸಲು ನಿರ್ಣಯಿಸಲಾಗಿತ್ತು.

ಮುಂದುವರೆದು, ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಪರೀಕ್ಷಾ ಫಲಿತಾಂಶ ನೀಡಲು ಮೆ॥ ಲಾಜಿಸಿಸ್ ಸಂಸ್ಥೆಯವರು ಒಂದು ವಿದ್ಯಾರ್ಥಿಗೆ ರೂ.400–00 ರಂತೆ ಮೆ॥ ಯುನಿಕ್ಲೇರ್ ಸಂಸ್ಥೆಯವರು ಒಂದು ವಿದ್ಯಾರ್ಥಿಗೆ ರೂ.270–00 ರಂತೆ ನಿಗದಿಪಡಿಸಿರುತ್ತಾರೆ.

ಈ ಕುರಿತು ಮಾನ್ಯ ಕುಲಪತಿಗಳು ಸದರಿ ಸಂಸ್ಥೆಯವರ ಜೊತೆಗೆ ಚರ್ಚಿಸಿ ಅನುತ್ತೀರ್ಣಗೊಂಡ ಒಟ್ಟು ವಿದ್ಯಾರ್ಥಿಗಳಿಗೆ ಅನುಗುಣವಾಗಿ 01 ವಿದ್ಯಾರ್ಥಿಗೆ ರೂ.400/– ರ ಬದಲಾಗಿ ರೂ.365/– ರಂತೆ ಹಾಗೂ ರೂ.270/–ರ ಬದಲಾಗಿ ರೂ.235/– ಗಳನ್ನು ನಿಗದಿಪಡಿಸಿರುವ ಕುರಿತು ಸಭೆಗೆ ವಿವರಿಸಿದರು ನಂತರ ಸಭೆಯು ಮೊತ್ತ ಪಾವತಿಸಲು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು | |
| --- | --- |
| ವಿಷಯ ಸಂಖ್ಯೆ: | ಸಿಂ.08(a)/(12/23) |

## -: ಟಿಪ್ಪಣಿ :-

ವಿಷಯ: ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ) ಚಿತ್ರದುರ್ಗ ಈ ಕಾಲೇಜಿಗೆ ಸ್ವಾಯತ್ತ ಮಾನ್ಯತೆಯನ್ನು ಮುಂದುವರೆಸಲು ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:
1. ಯುಜಿಸಿ ಪತ್ರಸಂಖ್ಯೆ: F.2-10/ 2023 (AC-Policy) ದಿನಾಂಕ:31.05.2023.
2. ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ:DU/CDC/Autonomous/221-78/ 2023-24/3061 ದಿನಾಂಕ:22.11.2023

*********

Deputy Secretary, University Grants Commission, New Delhi – ಇವರು ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ ಈ ಕಾಲೇಜಿಗೆ ಯುಜಿಸಿ ಕಾಯ್ದೆ 2023, ಪ್ರಕರಣ 8.1 ರನ್ವಯ, 2021–22ನೇ ಶೈಕ್ಷಣಿಕ ವರ್ಷದಿಂದ 2025–2026ನೇ ಶೈಕ್ಷಣಿಕ ವರ್ಷದವರೆಗೆ 05 ವರ್ಷಗಳ ಅವಧಿಗೆ ಷರತ್ತಿನೊಂದಿಗೆ ಸ್ವಾಯುತ್ತ ಮಾನ್ಯತೆಯನ್ನು ಮುಂದುವರೆಸಿ, ಉಲ್ಲೇಖಿತ(1)ರಲ್ಲಿ ಆದೇಶವನ್ನು ನೀಡಿರುತ್ತದೆ.

ಆದುದರಿಂದ, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ – ಈ ಕಾಲೇಜಿಗೆ 2021–2022 ರಿಂದ 2025–2026ರ ಶೈಕ್ಷಣಿಕ ವರ್ಷದವರೆಗೆ ಯುಜಿಸಿ ಕಾಯ್ದೆ 2023, ಪ್ರಕರಣ 4.2 ರನ್ವಯ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000, ಪ್ರಕರಣ 64(3) ರನ್ವಯ, ಸದರಿ ಕಾಲೇಜಿಗೆ 05 ಶೈಕ್ಷಣಿಕ ವರ್ಷಗಳ ಅವಧಿಗೆ ಸ್ವಾಯತ್ತ ಮಾನ್ಯತೆಯನ್ನು ಮುಂದುವರಿಸಲಾಗಿದೆ.

ತತ್ಸಂಬಂಧವಾಗಿ, ಈ ಮೇಲ್ಕಂಡ ಮಾಹಿತಿಯನ್ನು ದಿನಾಂಕ:05.12.2023ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.

### ನಿರ್ಣಯ

ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ – ಈ ಕಾಲೇಜಿಗೆ 2021–2022 ರಿಂದ 2025–2026ರ ಶೈಕ್ಷಣಿಕ ವರ್ಷದವರೆಗೆ ಯುಜಿಸಿ ಕಾಯ್ದೆ 2023, ಪ್ರಕರಣ 4.2 ರನ್ವಯ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000, ಪ್ರಕರಣ 64(3) ರನ್ವಯ 05 ಶೈಕ್ಷಣಿಕ ವರ್ಷಗಳ ಅವಧಿಗೆ ಸ್ವಾಯತ್ತ ಮಾನ್ಯತೆ ಮುಂದುವರಿಸಿರುವುದನ್ನು ಸಭೆಯು ಸ್ಥಿರೀಕರಿಸಿ ಒಮ್ಮತದಿಂದ ಘಟನೋತ್ತರವಾಗಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು | |
|---|---|
| ವಿಷಯ ಸಂಖ್ಯೆ: | ಸಿಂ.8(b)/(12/23) |

## -: ಟಿಪ್ಪಣಿ :-

ವಿಷಯ: ದಾವಣಗೆರೆಯ ಕೆ.ಎಸ್.ಎಸ್. ಪೌಂಡೇಷನ್ ಸಂಸ್ಥೆಯಡಿಯಲ್ಲಿ ನಡೆಸುತ್ತಿದ್ದ ಸ್ನಾತಕೋತ್ತರ ಶಿಕ್ಷಣ ವಿಭಾಗಕ್ಕೆ(ಎಂ.ಇಡಿ) ಕೋರ್ಸಿಗೆ **2023-24ನೇ** ಶೈಕ್ಷಣಿಕ ಸಾಲಿಗೆ ಸಂಯೋಜನೆ ನೀಡುವ ಸಂಬಂಧ ಸ್ಥಳೀಯ ತಪಾಸಣಾ ಸಮಿತಿಯನ್ನು ನೀಯೋಜಿಸಿರುವ ಕುರಿತು.

ಉಲ್ಲೇಖ:
1. ಸರ್ಕಾರದ ಪತ್ರ ಸಂಖ್ಯೆ: ಇಡಿ 217 ಯುಎನ್ಇ 2023, ದಿ:24.11.2023.
2. ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ:ದಾವಿವಿ/ಸಿಡಿಸಿ/2047-64/2023-24/3162, ದಿನಾಂಕ:02.12.2023.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:02.12.2023.

ಉಲ್ಲೇಖ(1)ರ ಸರ್ಕಾರದ ನಿರ್ದೇಶಾನುಸಾರ, ವಿಶ್ವವಿದ್ಯಾನಿಲಯದ ವ್ಯಾಪ್ತಿಯ ದಾವಣಗೆರೆಯ ಕೆ.ಎಸ್.ಎಸ್. ಪೌಂಡೇಷನ್ ಸಂಸ್ಥೆಯಡಿಯಲ್ಲಿ ನಡೆಸುತ್ತಿದ್ದ ಸ್ನಾತಕೋತ್ತರ ಶಿಕ್ಷಣ ವಿಭಾಗಕ್ಕೆ(ಎಂ.ಇಡಿ) ಕೋರ್ಸಿಗೆ 2023-24ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ನೀಡುವ ಸಂಬಂಧ, ಕಾಲೇಜಿನ ಭೌತಿಕ ಪರಿಶೀಲನೆ ನಡೆಸಲು ಈ ಕೆಳಕಂಡ ಸದಸ್ಯರನ್ನೊಳಗೊಂಡ ವಿಶ್ವವಿದ್ಯಾನಿಲಯದ ಸ್ಥಳೀಯ ಪರಿಶೀಲನಾ ಸಮಿತಿಯನ್ನು ದಿನಾಂಕ:04.12.2023ರಂದು ರಚಿಸಿ ಕಾಲೇಜಿನ ಮ್ಯಾನ್ಯುಯಲ್‌ನಲ್ಲಿ ಭೌತಿಕ ಪರಿಶೀಲನೆಗಾಗಿ ನಿಯೋಜಿಸಲಾಗಿತ್ತು.

| ಕ್ರ.ಸಂ. | ಹೆಸರು ಮತ್ತು ವಿಳಾಸ | ಸಂಯೋಜನಾ ಸಮಿತಿ |
|---|---|---|
| 1 | ಪ್ರೊ: ವೆಂಕಟೇಶ್.ಕೆ, ಡೀನರು, ಶಿಕ್ಷಣ ನಿಕಾಯ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ. ದೂ.ಸಂ:+9194486 30136 | ಅಧ್ಯಕ್ಷರು |
| 2 | ಡಾ: ಪಾಲಾಟಿ ವೆಂಕಟರಾವ್ ಮಾರುತಿರಾವ್. ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ. ದೂ.ಸಂ:+91 80738-22271. | ಸದಸ್ಯರು |
| 3 | ಡಾ: ಪ್ರಕಾಶ ಡಿ. ಜಿ. ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ. ಮೊ.ಸಂ. 8095907689 | ಸದಸ್ಯರು |
| 4 | ಶ್ರೀ ಮಂಜುನಾಥ. ಎ. ಕಂಪ್ಯೂಟರ್ ಅಪರೇಟರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – 577 007. ಮೊ:+91 97382 55461 | ಕಂಪ್ಯೂಟರ್ ಅಪರೇಟರ್ |

ಈ ವಿಷಯವನ್ನು, ದಿನಾಂಕ:05.12.2023ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.

## ನಿರ್ಣಯ

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ದಾವಣಗೆರೆಯ ಕೆ.ಎಸ್.ಎಸ್. ಪೌಂಡೇಷನ್ ಸಂಸ್ಥೆಯಡಿಯಲ್ಲಿ ನಡೆಸುತ್ತಿದ್ದ ಸ್ನಾತಕೋತ್ತರ ಶಿಕ್ಷಣ ವಿಭಾಗಕ್ಕೆ(ಎಂ.ಇಡಿ) ಕೋರ್ಸಿಗೆ 2023-24ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ನೀಡುವ ಸಂಬಂಧ, ದಿನಾಂಕ:04.12.2023ರಂದು ಕಾಲೇಜಿನ ಭೌತಿಕ ಪರಿಶೀಲನೆ ನಡೆಸಲು ಈ ಮೇಲ್ಕಂಡ ಸದಸ್ಯರನ್ನೊಳಗೊಂಡ ವಿಶ್ವವಿದ್ಯಾನಿಲಯದ ಸ್ಥಳೀಯ ಪರಿಶೀಲನಾ ಸಮಿತಿಯನ್ನು ರಚಿಸಿರುವುದನ್ನು ಸಭೆಯು ಸ್ಥಿರೀಕರಿಸಿ ಒಮ್ಮತದಿಂದ ಘಟನೋತ್ತರವಾಗಿ ಅನುಮೋದಿಸಿತು.

ಕುಲಸಚಿವರು　　　　ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು | |
|---|---|
| ವಿಷಯ ಸಂಖ್ಯೆ: | ಸಿಂ.08(c)/(12/23) |

## -: ಟಿಪ್ಪಣಿ :-

**ವಿಷಯ:** **ದಾವಣಗೆರೆಯ ಕೆ.ಎಸ್.ಎಸ್. ಫೌಂಡೇಷನ್ ಸಂಸ್ಥೆಯಡಿಯಲ್ಲಿ ನಡೆಸುತ್ತಿದ್ದ ಸ್ನಾತಕೋತ್ತರ ವಿಭಾಗಕ್ಕೆ (ಎಂ.ಇಡಿ) ಕೋರ್ಸಿಗೆ 2023-24ನೇ ಶೈಕ್ಷಣಿಕ ಸಾಲಿನ ಸಂಯೋಜನೆ ನೀಡುವ ಕುರಿತು.**

ಉಲ್ಲೇಖ:
1. ಸರ್ಕಾರದ ಆದೇಶ ಸಂ: ಇಡಿ217 ಯುಎನ್ಇ 2023, ದಿನಾಂಕ:24.11.2023.
2. ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ:ದಾವಿವಿ/ ಸಿಡಿಸಿ/ 207-64/2023-24/ 3163, ದಿನಾಂಕ:02.12.2023.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:02.12.2023

****

ಉಲ್ಲೇಖಿತ(1)ರ ಸರ್ಕಾರದ ಆದೇಶಾನುಸಾರ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ವಿಶ್ವವಿದ್ಯಾನಿಲಯದ ವ್ಯಾಪ್ತಿಯ ದಾವಣಗೆರೆಯ ಕೆ,.ಎಸ್.ಎಸ್. ಫೌಂಡೇಷನ್ ಸಂಸ್ಥೆಯಡಿಯಲ್ಲಿ ನಡೆಸುತ್ತಿದ್ದ ಸ್ನಾತಕೋತ್ತರ ವಿಭಾಗಕ್ಕೆ (ಎಂ.ಇಡಿ) ಕೋರ್ಸಿಗೆ 2023-24ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಸಂಬಂಧ, ಮುಂದುವರಿಕೆ ಸಂಯೋಜನೆಗಾಗಿ ಸಲ್ಲಿಸಲಾಗಿದ್ದ ಅರ್ಜಿಯ ಸಂಬಂಧ, ಕಾಲೇಜಿನ ಭೌತಿಕ ಪರಿಶೀಲನೆಗೆ ವಿಶ್ವವಿದ್ಯಾನಿಲಯದ ಪರಿಶೀಲನಾ ಸಮಿತಿಯನ್ನು ದಿನಾಂಕ:04.12.2023ರಂದು ನಿಯೋಜಿಸಲಾಗಿತ್ತು. ವಿಶ್ವವಿದ್ಯಾನಿಲಯದ ಪರಿಶೀಲನಾ ಸಮಿತಿಯು ಸದರಿ ಕಾಲೇಜಿಗೆ ಭೌತಿಕವಾಗಿ ಭೇಟಿ ನೀಡಿ, ಕಾಲೇಜಿನ ಭೌತಿಕ ಪರಿಶೀಲನೆ ನಡೆಸಿ ಪರಿಶೀಲನಾ ಸಮಿತಿಯು ತನ್ನ ಶಿಫಾರಸ್ಸು ವರದಿಯನ್ನು ಸಲ್ಲಿಸಿರುತ್ತದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಸೆಕ್ಷನ್ (59)ರನ್ವಯ, ಸದರಿ ಪರಿಶೀಲನಾ ಸಮಿತಿಗಳ ಶಿಫಾರಸ್ಸು ವರದಿಯನ್ನು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಮಾಹಿತಿಯನ್ನು ಸಲ್ಲಿಸಬೇಕಾಗಿರುತ್ತದೆ.

ತತ್ಸಂಬಂಧ, ಈ ವಿಷಯವನ್ನು ದಿನಾಂಕ:05.12.2023ರಂದು ಏರ್ಪಡಿಸಿರುವ ಸಿಂಡಿಕೇಟ್ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

### ನಿರ್ಣಯ

2023-24ನೇ ಶೈಕ್ಷಣಿಕ ಸಾಲಿಗೆ ದಾವಣಗೆರೆಯ ಕೆ.ಎಸ್.ಎಸ್. ಫೌಂಡೇಷನ್ ಸಂಸ್ಥೆಯಡಿಯಲ್ಲಿ ನಡೆಸುತ್ತಿದ್ದ ಸ್ನಾತಕೋತ್ತರ ವಿಭಾಗಕ್ಕೆ (ಎಂ.ಇಡಿ) ಕೋರ್ಸಿಗೆ ಸಂಯೋಜನೆ ನೀಡುವ ಕುರಿತಂತೆ ಸದರಿ ಸಂಸ್ಥೆಯು ಎನ್.ಸಿ.ಟಿ.ಇ. ಮತ್ತು ಸರ್ಕಾರದ ಅನುಮೋದನೆ ಪಡೆದಿರುವುದರಿಂದ ಸದರಿ ವಿಷಯವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದನೆಯನ್ನು ಕಾಯ್ದಿರಿಸಿ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಅನುಮೋದನೆ ನೀಡಲು ಸಭೆಯು ನಿರ್ಣಯಿಸಿತು.

**ಷರತ್ತುಗಳು:-**

1. ಮುಂಬರುವ ದಿನಗಳ ಇಂತಹ ಪ್ರಕರಣಗಳು ಮತ್ತೊಮ್ಮೆ ಮರುಕಳಿಸದಂತೆ ಕಾಲೇಜಿನ ಆಡಳಿತ ಮಂಡಳಿಯವರು ಎಚ್ಚರಿಕೆ ವಹಿಸತಕ್ಕದ್ದು.
2. ಕಳೆದ 07 (2016-17 ರಿಂದ 2022-23ನೇ ಶೈಕ್ಷಣಿಕ ವರ್ಷಗಳು) ವರ್ಷಗಳ ಅವಧಿಯಲ್ಲಿ ವಿಶ್ವವಿದ್ಯಾನಿಲಯವು ನಿಗಧಿಪಡಿಸಿದ ಮುಂದುವರಿಕೆ ಸಂಯೋಜನಾ ಶುಲ್ಕಗಳನ್ನು ಎಂ.ಇಡಿ. ಪದವಿ ಕೋರ್ಸಿನ ಪ್ರವೇಶಾನುಮೋದನೆ ಸಂದರ್ಭದಲ್ಲಿ ಕಡ್ಡಾಯವಾಗಿ ಪಾವತಿಸತಕ್ಕದ್ದು ಹಾಗೂ ಈ ಕುರಿತು ವಿಶ್ವವಿದ್ಯಾನಿಲಯಕ್ಕೆ ಒಪ್ಪಂದದ ಪತ್ರವನ್ನು ಸಲ್ಲಿಸತಕ್ಕದ್ದು.

ಮುಂದುವರೆದಿದೆ..

ಕುಲಸಚಿವರು

ಕುಲಪತಿಗಳು

3. ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಮೇಲ್ಕಂಡ ಕಾಲೇಜಿನಲ್ಲಿ ಎಂ.ಇಡಿ. ಕೋರ್ಸಿಗೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅದನ್ನು ಶಾಶ್ವತ ಅನುದಾನರಹಿತ ಕೋರ್ಸು ಎಂದು ಪರಿಗಣಿಸತಕ್ಕದ್ದು ಹಾಗೂ ಈ ಕುರಿತು ಸರ್ಕಾರಕ್ಕೆ ಒಪ್ಪಂದದ ಪತ್ರವನ್ನು ಸಲ್ಲಿಸತಕ್ಕದ್ದು.
4. ಮೇಲ್ಕಂಡ ಕಾಲೇಜು ವಿಶ್ವವಿದ್ಯಾನಿಲಯದ ನಿಯಮಾವಳಿಗಳ ಉಪಬಂಧಗಳನ್ನು ತಪ್ಪದೇ ಪಾಲಿಸತಕ್ಕದ್ದು.
5. ನಿಗದಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಮಾಡತಕ್ಕದ್ದಲ್ಲ.
6. ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ, ಆದೇಶಗಳು ಹಾಗೂ ವಿಶ್ವವಿದ್ಯಾನಿಲಯದ ಅನುಶಾಸನ, ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
7. ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಪ್ರತಿಯೊಂದು ಷರತ್ತನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
8. ಕಾಲೇಜು/ ಆಡಳಿತ ಮಂಡಳಿಯು ಶೇಕಡಾ 50 ರಷ್ಟು ವಿಶ್ವವಿದ್ಯಾನಿಲಯ ಕೋಟಾವನ್ನು (ಎಲ್ಲಿ ಅನ್ವಯವಾಗುತ್ತದೆಯೋ ಅಲ್ಲಿ) ಶುಲ್ಕವನ್ನು ಮಾತ್ರ ವಸೂಲು ಮಾಡತಕ್ಕದ್ದು, ವಿಶ್ವವಿದ್ಯಾನಿಲಯವು ನಿಗದಿಪಡಿಸಿದ ಶುಲ್ಕ ಮೊತ್ತಕ್ಕಿಂತ ಬೇರೆ ಹೆಚ್ಚಿನ ಮೊತ್ತವನ್ನು ವಸೂಲು ಮಾಡತಕ್ಕದ್ದಲ್ಲ.
9. ದಿನಾಂಕ:13.08.1997ರಂದು ವಿಶಾಖ v/s ರಾಜಸ್ಥಾನ ಸರ್ಕಾರ ಮೊಕದ್ದಮೆಯಲ್ಲಿ ಸುಪ್ರಿಂ ಕೋರ್ಟ್ ನೀಡಿರುವ ತೀರ್ಪಿನನುಸಾರ ಯಾವುದೇ ವ್ಯಕ್ತಿ/ವಿದ್ಯಾರ್ಥಿಯು ಗಲಭೆಯನ್ನು ಉಂಟು ಮಾಡುವುದಾಗಲೀ ಅಥವಾ ಕಾಲೇಜಿನಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನೀಡಿದ್ದಲ್ಲಿ, ಅದು ಸಂಜ್ಞೇಯ ಅಪರಾಧ (Cognizable Offence) ಎಂದು ಪರಿಗಣಿಸಿ, ಈ ತರಹದ ಚಟುವಟಿಕೆಗಳಲ್ಲಿ ತೊಡಗಿದ ವಿದ್ಯಾರ್ಥಿ/ವ್ಯಕ್ತಿಯ ಪ್ರವೇಶವನ್ನು ರದ್ದುಪಡಿಸುವುದು; ಮತ್ತು ಆ ವ್ಯಕ್ತಿ/ವಿದ್ಯಾರ್ಥಿಯ ಮೇಲೆ ಕಾನೂನು ರಿತ್ಯಾ ಕ್ರಮ ಜರುಗಿಸತಕ್ಕದ್ದು; ಮುಂದುವರೆದು, ಕಾಲೇಜು/ಆಡಳಿತ ಮಂಡಳಿಯು ಸುಪ್ರಿಂಕೋರ್ಟಿನ ಆದೇಶದನ್ವಯ ಒಂದು ದೂರು ಸಮಿತಿಯನ್ನು ರಚಿಸಿ; ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ಜರುಗಿಸತಕ್ಕದ್ದು.
10. ಕಾಲೇಜು ವಿದ್ಯಾರ್ಥಿಗಳ ಬೆಳವಣಿಗೆಗಾಗಿ ಉತ್ತಮ ಕೋರ್ಸಗಳನ್ನು ನಡೆಸತಕ್ಕದ್ದು; ಕಾಲೇಜಿನ ಪ್ರಾಂಶುಪಾಲರು/ಆಡಳಿತ ಮಂಡಳಿಯು ವಿದ್ಯಾರ್ಥಿ/ಬೋಧಕ ವೃಂದವನ್ನು ಸೌಹಾರ್ದಯುತವಾಗಿ ಕಾಣತಕ್ಕದ್ದು.
11. ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯ ಅಂಕಪಟ್ಟಿ ಅಥವಾ ಇತರೆ ದಾಖಲಾತಿಗಳನ್ನು ಸದರಿ ವಿದ್ಯಾರ್ಥಿಯ ಪ್ರವೇಶವನ್ನು ವಿಶ್ವವಿದ್ಯಾನಿಲಯವು ಅನುಮೋದಿಸುವವರೆಗೆ ಅಥವಾ 06 ತಿಂಗಳ ಅವಧಿಗೆ ಮೀರಿ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅನಗತ್ಯವಾಗಿ ತಡೆಹಿಡಿಯತಕ್ಕದ್ದಲ್ಲ.
12. ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯು ವರ್ಗಾವಣೆ ಪ್ರಮಾಣ ಪತ್ರ ಬೇಕೆಂದು ಅಪೇಕ್ಷಿಸಿ ಅರ್ಜಿ ಸಲ್ಲಿಸಿದ್ದಲ್ಲಿ, ಅದನ್ನು ವಿತರಿಸುವಾಗ ವಿದ್ಯಾರ್ಥಿಗೆ ತೊಂದರೆ ನೀಡತಕ್ಕದ್ದಲ್ಲ; ಹಾಗೂ ಅವರಿಂದ ಬಾಕಿ ಉಳಿದಿರುವ ಶೈಕ್ಷಣಿಕ ವರ್ಷ/ಸೆಮಿಸ್ಟರ್ ಅವಧಿಗೆ ಮಾತ್ರ ಬೋಧಕ ಶುಲ್ಕವನ್ನು ಪಡೆಯತಕ್ಕದ್ದು ಹಾಗೂ ಬೇರೆ ಯಾವುದೇ ಮೊತ್ತವನ್ನು ಪಡೆಯತಕ್ಕದ್ದಲ್ಲ.
13. ಕ್ಯಾಪಿಟೇಷನ್ ಶುಲ್ಕವನ್ನು ಯಾವುದೇ ರೂಪದಲ್ಲೂ ಪಡೆಯತಕ್ಕದ್ದಲ್ಲ.
14. ಪ್ರವೇಶಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಕಟ್ಟು ನಿಟ್ಟಾಗಿ ಪಾಲಿಸತಕ್ಕದ್ದು.
15. ಆಡಳಿತ ವ್ಯವಹಾರದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸತಕ್ಕದ್ದು.
16. ಸ್ಥಳೀಯ ತಪಾಸಣಾ ಸಮಿತಿಯು ವಿಧಿಸಿರುವ ಷರತ್ತುಗಳನ್ನು ಕಾರ್ಯಗತಗೊಳಿಸಿ, ಪೂರಕ ದಾಖಲೆಗಳೊಂದಿಗೆ ಅನುಪಾಲನಾ ವರದಿಯನ್ನು **ದಿನಾಂಕ:29.02.2024ರೊಳಗಾಗಿ** ವಿಶ್ವವಿದ್ಯಾನಿಲಯಕ್ಕೆ ಕಡ್ಡಾಯವಾಗಿ ಸಲ್ಲಿಸುವ ಷರತ್ತಿಗೊಳಪಟ್ಟು 2023-24ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಮಾತ್ರ ಸಂಯೋಜನೆ ನೀಡಲಾಗಿದೆ.

ಕುಲಸಚಿವರು

ಕುಲಪತಿಗಳು

| USIC ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.09(a)/(10/23) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ USIC ಕೇಂದ್ರಕ್ಕೆ ತಾಂತ್ರಿಕ ಸಹಾಯಕ (Technical Assistant) ನೇಮಿಸುವ ಕುರಿತು.**

*****

ವಿಶ್ವವಿದ್ಯಾನಿಲಯದ ಎಲ್ಲಾ ವಿಜ್ಞಾನ ವಿಭಾಗಗಳ ಸಂಶೋಧನಾ ವಿದ್ಯಾರ್ಥಿಗಳಿಗೆ ಹಾಗೂ ಅಧ್ಯಾಪಕರುಗಳಿಗೆ ಸಂಶೋಧನಾ ಚಟುವಟಿಕೆಗಳನ್ನು ಕೈಗೊಳ್ಳಲು ವಿಶ್ವವಿದ್ಯಾನಿಲಯದ ವೈಜ್ಞಾನಿಕ ಉಪಕರಣ ಕೇಂದ್ರವನ್ನು (University Scientific Instrumentation Centre) ಸ್ಥಾಪಿಸಲಾಗಿರುತ್ತದೆ.

ತತ್ಸಂಬಂಧ, ಸದರಿ ಕೇಂದ್ರದಲ್ಲಿರುವ ವೈಜ್ಞಾನಿಕ ಉಪಕರಣಗಳ ನಿರ್ವಹಣೆ ಹಾಗೂ ಮೇಲ್ವಿಚಾರಣೆ ಮಾಡಲು ಒಬ್ಬ ತಾಂತ್ರಿಕ ಸಹಾಯಕರ ನೇಮಕ ಮಾಡುವ ಕುರಿತು ದಿನಾಂಕ:05.12.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

<u>ನಿರ್ಣಯ</u>

University Scientific Instrumentation Centre (USIC) ಕೇಂದ್ರದಲ್ಲಿರುವ ವೈಜ್ಞಾನಿಕ ಉಪಕರಣಗಳ ನಿರ್ವಹಣೆ ಹಾಗೂ ಮೇಲ್ವಿಚಾರಣೆ ಮಾಡಲು ಹೊರಗುತ್ತಿಗೆ ಆಧಾರದ ಮೇಲೆ B.Sc ಅಥವಾ Diploma ವಿದ್ಯಾರ್ಹತೆ ಹೊಂದಿರುವ ಒಬ್ಬ ತಾಂತ್ರಿಕ ಸಹಾಯಕರನ್ನು ನೇಮಕ ಮಾಡಿಕೊಳ್ಳಲು ಸಭೆಯು ಒಮ್ಮತದಿಂದ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಭೌತಶಾಸ್ತ್ರ ಅಧ್ಯಯನ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.10(a)/(10/23) |

## –:ಟಿಪ್ಪಣಿ:–

ವಿಷಯ: **VGST-KFIST L1 2nd Phase (ಎಲೆಕ್ಟ್ರೋ ಕೆಮಿಕಲ್ ವರ್ಕ್‌ಸ್ಟೇಷನ್) ಉಪಕರಣವನ್ನು ಇ-ಟೆಂಡರ್ ಮೂಲಕ ಖರೀದಿಸಿದ ಬಾಬ್ತು ರೂ.8,99,160-00 ಗಳನ್ನು ಪಾವತಿಸಲು ಅನುಮೋದನೆ ಕುರಿತು.**

*****

ವಿಶ್ವವಿದ್ಯಾನಿಲಯದ ಭೌತಶಾಸ್ತ್ರ ಅಧ್ಯಯನ ವಿಭಾಗಕ್ಕೆ VGST-KFIST L1 2nd Phase ಸಂಶೋಧನಾ ಪ್ರಾಜೆಕ್ಟ್ (Research Project) ಅಡಿಯಲ್ಲಿ ಇ-ಟೆಂಡರ್ ಮೂಲಕ ಎಲೆಕ್ಟ್ರೋ ಕೆಮಿಕಲ್ ವರ್ಕ್ ಸ್ಟೇಷನ್ ಉಪಕರಣವನ್ನು ಖರೀದಿಸಿದ್ದು, ಇದರ ಒಟ್ಟು ಮೊತ್ತ ರೂ.8,99,160/- (ಎಂಟು ಲಕ್ಷದ ತೊಂಬತ್ತೊಂಬತ್ತು ಸಾವಿರದ ಒಂದು ನೂರ ಅರವತ್ತು ಮಾತ್ರ) ಗಳನ್ನು **SINSIL International Pvt. Ltd** ಇವರಿಗೆ ಪಾವತಿಸಲಾಗಿದೆ. ಆದ್ದರಿಂದ ಸದರಿ ವಿಷಯವನ್ನು ದಿನಾಂಕ:05.12.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ಭೌತಶಾಸ್ತ್ರ ಅಧ್ಯಯನ ವಿಭಾಗಕ್ಕೆ VGST-KFIST L1 2nd Phase ಸಂಶೋಧನಾ ಪ್ರಾಜೆಕ್ಟ್ (Research Project) ಅಡಿಯಲ್ಲಿ ಇ-ಟೆಂಡರ್ ಮೂಲಕ ಎಲೆಕ್ಟ್ರೋ ಕೆಮಿಕಲ್ ವರ್ಕ್‌ಸ್ಟೇಷನ್ ಉಪಕರಣವನ್ನು ಖರೀದಿಸಿದ ಬಾಬ್ತು ರೂ.8,99,160/- ಗಳನ್ನು **SINSIL International Pvt. Ltd** ಇವರಿಗೆ ಪಾವತಿ ಮಾಡಿರುವುದನ್ನು ಘಟನೋತ್ತರವಾಗಿ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಸೂಕ್ಷ್ಮಾಣು ಜೀವಶಾಸ್ತ್ರ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.11(a)/(10/23) |

## -:ಟಿಪ್ಪಣಿ:-

**ವಿಷಯ: ಸೂಕ್ಷ್ಮಾಣು ಜೀವಶಾಸ್ತ್ರ ವಿಭಾಗದ Microscope, Spectrophotometer, LED Projector ಗಳನ್ನು ಹಾಗೂ ಅನೇಕ ಉಪಕರಣಗಳನ್ನು ಖರೀದಿಸಲು ಮತ್ತು ರಿಪೇರಿ ಮಾಡಿಸಲು ಕನಿಷ್ಠ 10,00,000/- (ಹತ್ತು ಲಕ್ಷ) ರೂ.ಗಳನ್ನು ಮಂಜೂರು ಮಾಡುವ ಕುರಿತು.**

*****

ವಿಶ್ವವಿದ್ಯಾನಿಲಯದ ಸೂಕ್ಷ್ಮಾಣು ಜೀವಶಾಸ್ತ್ರ ಅಧ್ಯಯನ ವಿಭಾಗದಲ್ಲಿ ದಿನಾಂಕ:15.11.2023 ರಂದು ಕೌನ್ಸಿಲ್ ಸಭೆಯ ನಡಾವಳಿಗಳ ಮೇರೆಗೆ ಈ ವಿಭಾಗವು 1994 ರಲ್ಲಿ ಪ್ರಾರಂಭವಾಗಿದ್ದು, ಅಲ್ಲಿಂದ ಇಲ್ಲಿವರೆಗೂ ಅನೇಕ ಉಪಕರಣಗಳನ್ನು ಖರೀದಿಸಿದ್ದು ಅವುಗಳಲ್ಲಿ ಅನೇಕ ಉಪಕರಣಗಳು ರೀಪೇರಿಗೆ ಬಂದಿರುತ್ತವೆ ಹಾಗೂ ಸದರಿ ವಿಭಾಗವು ಕಳೆದ ಮೂರು ವರ್ಷಗಳಲ್ಲಿ ಸುಮಾರು 90 ವಿದ್ಯಾರ್ಥಿಗಳು ಪ್ರತಿ ವರ್ಷ ಪ್ರವೇಶಾತಿ ಪಡೆದಿದ್ದು ಹಾಗೂ 13 ಸಂಶೋಧನಾ ವಿದ್ಯಾರ್ಥಿಗಳು ಇದ್ದಾರೆ. ಒಟ್ಟಾರೆ 100 ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಕಳೆದ ಮೂರು ವರ್ಷಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ದ್ವಿಗುಣವಾಗಿರುತ್ತದೆ. ಆದ್ದರಿಂದ, ವಿಭಾಗದ ಹಳೆಯ ಉಪಕರಣಗಳನ್ನು ರೀಪೇರಿ ಮಾಡಿಸಿಕೊಳ್ಳಲು ಹಾಗೂ ವಿಭಾಗಕ್ಕೆ ಹೊಸ ಉಪಕರಣಗಳಾದ Microscope, Spectrophotometer, LED Projector ಗಳನ್ನು ಖರೀದಿಸಲು ನಮಗೆ ಕನಿಷ್ಠ ರೂ.10,00,000-00 (ರೂಪಾಯಿ ಹತ್ತು ಲಕ್ಷ ಮಾತ್ರ) ಗಳನ್ನು ಮಂಜೂರು ಮಾಡಲು ದಿನಾಂಕ:05.12.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### <u>ನಿರ್ಣಯ</u>

ಸೂಕ್ಷ್ಮಾಣು ಜೀವಶಾಸ್ತ್ರ ವಿಭಾಗದ Microscope, Spectrophotometer, LED Projector ಗಳನ್ನು ಹಾಗೂ ಅನೇಕ ಉಪಕರಣಗಳನ್ನು ಖರೀದಿಸಲು ಮತ್ತು ರಿಪೇರಿ ಮಾಡಿಸಲು 10,00,000/- (ಹತ್ತು ಲಕ್ಷ) ರೂ. ಗಳನ್ನು ವಿಶ್ವವಿದ್ಯಾನಿಲಯದ ಆರ್ಥಿಕ ಲಭ್ಯತೆಗನುಸಾರವಾಗಿ ಮಂಜೂರು ಮಾಡಲು ಸಭೆಯು ಒಮ್ಮತದಿಂದ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಇತಿಹಾಸ ಅಧ್ಯಯನ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.12(a)/(12/23) |

## –: ಟಿಪ್ಪಣಿ :–

**ವಿಷಯಃ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದಲ್ಲಿ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸುವ ಕುರಿತು.**

*********

ವಿಶ್ವವಿದ್ಯಾನಿಲಯದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಪಠ್ಯ ಮತ್ತು ಪಠ್ಯೇತರವಾಗಿ ಕೆಲಸ ಮಾಡಲು ಉತ್ಸುಕರಾಗಿರುತ್ತಾರೆ. ಆದ್ದರಿಂದ, ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳ ಗ್ರಾಮ ಹಾಗೂ ಪಟ್ಟಣಗಳಲ್ಲಿ ನಿರ್ಲಕ್ಷಕ್ಕೆ ಒಳಗಾಗಿರುವ ಹಳೆಯ ಪ್ರಾಚೀನ ಕಾಲದ ಶಾಸನಗಳು, ವೀರಗಲ್ಲುಗಳು, ಮಾಸ್ತಿಗಲ್ಲುಗಳು, ನಾಣ್ಯಗಳು ಮೂರ್ತಿಶಿಲ್ಪಗಳು ಹಾಗೂ ಇತ್ಯಾದಿ ಪ್ರಾಚ್ಯವಶೇಷಗಳನ್ನು ಸಂಗ್ರಹಿಸಲು ಸುಸಜ್ಜಿತವಾದ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸುವುದು ಅವಶ್ಯಕವಾಗಿರುತ್ತದೆ. ಆದ್ದರಿಂದ, ವಿಶ್ವವಿದ್ಯಾನಿಲಯದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದಲ್ಲಿ ಸುಸಜ್ಜಿತವಾದ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲು ದಿನಾಂಕ:05.12.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**<u>ನಿರ್ಣಯ</u>**

ವಿಶ್ವವಿದ್ಯಾನಿಲಯದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದಲ್ಲಿ ಸುಸಜ್ಜಿತವಾದ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಐ.ಕ್ಯೂ.ಎ.ಸಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.13(a)/(12/23) |

## -: ಟಿಪ್ಪಣಿ :-

ವಿಷಯಃ **UGC-CAS** ನಿಯಮದಡಿ ಸಹಾಯಕ ಪ್ರಾಧ್ಯಾಪಕರುಗಳಿಗೆ ವೃತ್ತಿ ಪದೋನ್ನತಿಗೆ ವಿಷಯ ತಜ್ಞರನ್ನು ಆಹ್ವಾನಿಸುವ ಹಾಗೂ **TA & DA** ನೀಡುವ ಕುರಿತು.

*********

ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರುಗಳ ವೃತ್ತಿ ಪದೋನ್ನತಿಯ ಅರ್ಜಿಗಳನ್ನು UGC-2018ರ ನಿಯಮಾವಳಿಯಂತೆ ಆಹ್ವಾನಿಸಿದ್ದು, ಅರ್ಜಿಗಳನ್ನು ಪರಿಶೀಲಿಸಿ ಮೌಲ್ಯಮಾಪನ ನಡೆಸಿ ಎ.ಜಿ.ಪಿ ಮಂಜೂರಾತಿ ಮಾಡಲು ಬಾಹ್ಯ ವಿಷಯ ತಜ್ಞರುಗಳನ್ನು ಆಹ್ವಾನಿಸಲು ಹಾಗೂ ಸದರಿಯವರಿಗೆ ನಿಯಮಾನುಸಾರ ಪ್ರಯಾಣಭತ್ಯೆ/ ದಿನಭತ್ಯೆ/ ಉಪಸ್ಥಿತ ಭತ್ಯೆ (TA/DA) ಪಾವತಿಸುವ ಬಗ್ಗೆ ದಿನಾಂಕ:05.12.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರುಗಳ ವೃತ್ತಿ ಪದೋನ್ನತಿಗೆ ಸಂಬಂಧಿಸಿದಂತೆ ಬಾಹ್ಯ ವಿಷಯ ತಜ್ಞರುಗಳನ್ನು ಆಹ್ವಾನಿಸಲು ಹಾಗೂ ಸದರಿಯವರಿಗೆ ನಿಯಮಾನುಸಾರ ಪ್ರಯಾಣಭತ್ಯೆ/ ದಿನಭತ್ಯೆಯನ್ನು (TA/DA) ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(b)/(10/23) |

## –:ಟಿಪ್ಪಣಿ:–

**ವಿಷಯ: ಶ್ರೀಮತಿ ಶಾರದಾ ಪಾಟೀಲ, ಮಾನ್ಯ ಸಿಂಡಿಕೇಟ್ ಸದಸ್ಯರು – ಇವರ ಪ್ರಸ್ತಾವನೆ ಕುರಿತು.**

*****

ಶ್ರೀಮತಿ ಶಾರದಾ ಪಾಟೀಲ, ಮಾನ್ಯ ಸಿಂಡಿಕೇಟ್ ಸದಸ್ಯರು, ದಾವಣಗೆರೆ ವಿಶ್ವವಿದ್ಯಾನಿಲಯ ಇವರು ದಿನಾಂಕ:23.11.2023 ರಂದು ಸಿಂಡಿಕೇಟ್ ಸಭೆಗೆ ಸಂಬಂಧಿಸಿದ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ದಿನಾಂಕ:05.12.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮಂಡಿಸಲಾಗಿದೆ.

<u>ನಿರ್ಣಯ</u>

| | |
|---|---|
| **ವಿಷಯ: 1** | ಪ್ರಸಾರಾಂಗವನ್ನು ಕ್ರಿಯಾಶೀಲಗೊಳಿಸುವ ಕುರಿತು. |
| ನಿರ್ಣಯ | ಪ್ರಸಾರಾಂಗದ ಸ್ಥಾಪನೆಗೆ ಸಂಬಂಧಪಟ್ಟ ಪರಿನಿಯಮಗಳನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿದ್ದು, ಪರಿನಿಯಮಗಳು ಅನುಮೋದನೆಯಾಗಿ ಬಂದ ನಂತರದಲ್ಲಿ ಪಬ್ಲಿಕೇಷನ್‌ಗೆ ಟೆಂಡರ್ ಕರೆದು ಕ್ರಮಕೈಗೊಳ್ಳಲಾಗುವುದು. |
| **ವಿಷಯ: 2** | 2018–19ನೇ ಸಾಲಿನ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳ ತಂತ್ರಾಂಶದ ಕುರಿತು ಈಗಾಗಲೇ ನೀಡಿದ ಉತ್ತರ ತೃಪ್ತಿಕರವಾಗಿಲ್ಲದ್ದರಿಂದ ವಿಸ್ತೃತವಾಗಿ ಚರ್ಚಿಸುವ ಕುರಿತು. |
| ನಿರ್ಣಯ | 2 ಸಂಸ್ಥೆಗಳು ಅವುಗಳ ಕಾರ್ಯ ಚಟುವಟಿಕೆಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸುವ ಮಾಹಿತಿಯನ್ನು ಶ್ರೀಮತಿ ಶಾರದಾ ಪಾಟೀಲ ಇವರಿಗೆ ನೀಡಲು ನಿರ್ಣಯಿಸಿತು. |
| **ವಿಷಯ: 3** | ಸಂಶೋಧನಾ ವಿದ್ಯಾರ್ಥಿಗಳ ಶಿಷ್ಯವೇತನದ ಬಗ್ಗೆ ಚರ್ಚಿಸುವ ಕುರಿತು. |
| ನಿರ್ಣಯ | ಶಿಷ್ಯವೇತನಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪತ್ರಿಸಲಾಗಿದೆ. ಸರ್ಕಾರದಿಂದ ಶಿಷ್ಯವೇತನ ಬಂದ ನಂತರದಲ್ಲಿ ಕ್ರಮಕೈಗೊಳ್ಳಲಾಗುವುದು. |

ಕುಲಸಚಿವರು

ಕುಲಪತಿಗಳು

"ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿರುವ ಇತರ ವಿಷಯಗಳು"

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(f)/(10/23) |

## -: ಟಿಪ್ಪಣಿ :-

ವಿಷಯಃ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಪ.ಜಾತಿ. ಮತ್ತು ಪ.ಪಂಗಡದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮ ಅನುಷ್ಠಾನಕ್ಕೆ ಸಬಲೀಕರಣ ಅಧಿಕಾರಿಯನ್ನು ನಿಯೋಜಿಸುವ ಕುರಿತು.

*********

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಪ.ಜಾತಿ ಹಾಗೂ ಪ.ಪಂಗಡ ವಿದ್ಯಾರ್ಥಿಗಳ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿಯ ಎಲ್ಲಾ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದಂತೆ SSP PORTAL ನ ತಾಂತ್ರಿಕ ಸಮಸ್ಯೆಗಳು ಇನ್ನಿತರೆ ವಿದ್ಯಾರ್ಥಿಗಳ ಸಂಪೂರ್ಣ ಸಮಸ್ಯೆಗಳು ಬಾರದಂತೆ ನೋಡಿಕೊಳ್ಳುವುದು ಹಾಗೂ ಕಾಲ-ಕಾಲಕ್ಕೆ ವಿದ್ಯಾರ್ಥಿವೇತನದ ಕುರಿತು ಕಾಲೇಜು ಪ್ರಾಂಶುಪಾಲರು/ನೋಡಲ್ ಅಧಿಕಾರಿಗಳಿಗೆ ಮಾಹಿತಿಯನ್ನು ನೀಡುವ ಕುರಿತು ಸಬಲೀಕರಣ ಅಧಿಕಾರಿಯನ್ನು ನೇಮಕ/ ನಿಯೋಜನೆ ಮಾಡಲು ದಿನಾಂಕ:05.12.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಲಾಗಿದೆ.

**ನಿರ್ಣಯ**

ಹೊರಗುತ್ತಿಗೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಪ್ರತಾಪ ಎ.ವಿ. ಇವರು ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದಂತೆ ಈ ಮೇಲ್ಕಂಡ ಎಲ್ಲಾ ಸಂಪೂರ್ಣ ಕಾರ್ಯಗಳನ್ನು ನಿರ್ವಹಿಸುತ್ತಿರುವುದರಿಂದ ಇವರನ್ನು ಹೊರಗುತ್ತಿಗೆ ಮೂಲಕ ಸಬಲೀಕರಣ ಅಧಿಕಾರಿ ಹುದ್ದೆಗೆ ನೇಮಕ ಮಾಡಿ ಮಾಸಿಕ ವೇತನ ರೂ.20,000/- ಗಳನ್ನು ನಿಗದಿಪಡಿಸಲು ಸಭೆಯ ಒಮ್ಮತದಿಂದ ಅನುಮೋದಿಸಿತು.

ಕೊನೆಯಲ್ಲಿ ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಕುಲಪತಿಗಳು